ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 3 ಜನವರಿ 20, 1980 40 ಪೈಸೆ

ಜನತೆಯ ಹೋರಾಟಗಳೇಕೆ?

"ದಿನೇ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯ" ಮಧ್ಯೆ ದೇಶಾದ್ಯಂತ ಸದ್ಯದಲೇ ಜನತಾ ಹೋರಾಟಗಳು ಆರಂಭವಾಗುವ ಸಂಭವವಿದೆಯೆಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಕಾಂ. ಇ. ಎಂ. ಎಸ್. ನಂಬೂದ್ರಿಪಾದ್‌ರವರು ತ್ರಿವೆಂದ್ರಂನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಾ. 11 ರಂದು ಹೇಳಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಹೇಳಿಕೆಯನ್ನು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಲೋಕಸಭಾ ಚುನಾವಣೆಯನ್ನು ವಿಮರ್ಶಿಸಿಕೊಟ್ಟ ಹೇಳಿಕೆಯನ್ನು ದೇಶದ ಎಲ್ಲ ಎಡಪಂಥವಾದಿಗಳೂ ಪ್ರಜಾಪ್ರಭುತ್ವವಾದಿಗಳೂ ಸ್ವಾಗತಿಸಿವೆ. ಆದರೆ ಕೆಲವರು ಇದನ್ನು ಟೀಕಿಸಿ ಬರೆದಿದ್ದಾರೆ.

ಜನವರಿ 16ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸಂಪಾದಕೀಯದಲ್ಲಿ ಎಡಪಕ್ಷಗಳು ಸರ್ಕಾರವನ್ನು ಎದುರು ಹಾಕಿಕೊಳ್ಳುವುದರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳಿದೆ. ಈ ಧೋರಣೆಯಿಂದ ನಂಬೂದ್ರಿಪಾದ್‌ರವರು ಅಪೇಕ್ಷಿಸುವ ಎಡ ಶಕ್ತಿಗಳ ಕ್ರೋಢೀಕರಣವೂ ಕಷ್ಟಸಾಧ್ಯವಾಗಬಹುದು ಮತ್ತು ದೇಶದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಸಾಮೂಹಿಕ ಹೋರಾಟಗಳು ತೀವ್ರ ಅಪಾಯಕಾರಿಯಾದುದೆಂದು ಆ ಪತ್ರಿಕೆ ಅಭಿಪ್ರಾಯಪಟ್ಟಿದೆ.

ಸಂಪಾದಕೀಯ

ಈ ಅಭಿಪ್ರಾಯ ಇತರರಿಗೂ ಇರಬಹುದು. ಆದರೆ ಕಾರ್ಮಿಕರಾಗಲಿ, ಇತರ ಶ್ರಮಜೀವಿ ವಿಭಾಗಗಳಾಗಲಿ ಹೋರಾಟಗಳನ್ನು ಎಲ್ಲ ಸಂದರ್ಭಗಳಲ್ಲೂ ನಡೆಸಬೇಕಾಗುತ್ತದೆ. ಮುಖ್ಯವಾಗಿ ಬೆಲೆಗಳು ನಿರಂತರವಾಗಿ ಏರುತ್ತಿರುವ ಸಂದರ್ಭದಲ್ಲಿ ತಮ್ಮ ಮೂಲ ವೇತನವನ್ನು ರಕ್ಷಿಸಲು ಅವರು ಹೋರಾಡಬೇಕಾಗಿದೆ. ಹಣದುಬ್ಬರ ತಲೆದೋರಿದಾಗ ಸಾಮಾನ್ಯವಾಗಿ ಜನತೆಯ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಆ ಸಂದರ್ಭದಲ್ಲಿ ತಮ್ಮ ಹಿಂದಿನ ಜೀವನಮಟ್ಟವನ್ನು ಉಳಿಸಿಕೊಳ್ಳಲಿಕ್ಕೂ ಕಾರ್ಮಿಕರು ಹೋರಾಟ ನಡೆಸಬೇಕಾಗಿದೆ. ಈಗ ನಮ್ಮ ದೇಶವನ್ನಾವರಿಸಿರುವ ಆರ್ಥಿಕ ಬಿಕ್ಕಟ್ಟು ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಾಗಿದೆ. ಬಂಡವಾಳಶಾಹಿಯು ಯಾವಾಗಲೂ ಆರ್ಥಿಕ ಬಿಕ್ಕಟ್ಟು ತಲೆದೋರಿದಾಗ ತನ್ನ ಲಾಭವನ್ನು ರಕ್ಷಿಸಲು ಬಿಕ್ಕಟ್ಟಿನ ಹೊರೆಯನ್ನು ಶ್ರಮಜೀವಿಗಳ ಮೇಲೆ ಹೊರಿಸುವುದು ಸಾಮಾನ್ಯ ನೀತಿಯಾಗಿದೆ. ಇದನ್ನೆದುರಿಸಿ ತಮ್ಮ ರಕ್ಷಣೆಗೆ ಜನತೆ ಅನಿವಾರ್ಯವಾಗಿ ಹೋರಾಟ ನಡೆಸಬೇಕಾಗಿದೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ. ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಈ ಪರಿಸ್ಥಿತಿ ಇನ್ನೂ ತೀವ್ರವಾಗುವ ಅಪಾಯವಿರುತ್ತದೆಂಬುದಾಗಿ ನಮ್ಮ ಪಾರ್ಟಿ ಎಚ್ಚರಿಕೆ ನೀಡಿರುವುದು ಸೂಕ್ತವಾಗಿದೆ.

[ಕಡೆಯ ಪುಟ ನೋಡಿ]

ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕು

ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಳಗೆ ಸಂಪೂರ್ಣ ಒಗ್ಗಟ್ಟು ಮತ್ತು ಸಹಕಾರವಿದ್ದಿದ್ದರೆ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿನ ವಿರುದ್ಧ ಹೋರಾಟವು ಇನ್ನೂ ಬಲಯುತವಾಗುವುದು ಸಾಧ್ಯವಿತ್ತು ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ಅಭಿಪ್ರಾಯಪಟ್ಟಿದೆ. ಲೋಕಸಭಾ ಚುನಾವಣಾ ಫಲಿತಾಂಶ ಹಾಗೂ ಪರಿಣಾಮವಾಗಿ ರಾಜ್ಯದಲ್ಲಿ ಉಂಟಾದ ಹೊಸ ರಾಜಕೀಯ ಬೆಳವಣಿಗೆ ಬಗ್ಗೆ ವಿಮರ್ಶಿಸಲು ಕಳೆದ ತಾರೀಖು 10 ರಂದು ಸೆಕ್ರೆಟಾರಿಯೆಟ್ ಸೇರಿತ್ತು.

ಸರ್ವಾಧಿಕಾರಿ ಶಕ್ತಿಗಳಿಗೆ ಪರಿಣಾಮಕಾರಿಯಾದ ಸವಾಲನ್ನು ಕೊಡಲು ಎಡ ಮತ್ತು ಪ್ರಜಾಸತ್ತಾತ್ಮಕ ಕೂಟಕ್ಕೆ ಮಾತ್ರ ಸಾಧ್ಯ ಎಂಬುದನ್ನು ಚುನಾವಣಾ ಫಲಿತಾಂಶವು ತೋರಿಸಿಕೊಟ್ಟಿದೆ. ಕರ್ನಾಟಕ ರಾಜ್ಯದಲ್ಲಿ ಬಲಿಷ್ಠವಾದ ಎಡ ಮತ್ತು ಪ್ರಜಾಸತ್ತಾತ್ಮಕ ಹೋರಾಟದ ಕೊರತೆ, ಜನರಲ್ಲಿ ಸಾಕಷ್ಟು ರಾಜಕೀಯ ಪ್ರಜ್ಞೆಯ ಅಭಾವ ಹಾಗೂ ಇದರೊಂದಿಗೆ ಕಾಂಗ್ರೆಸ್ಸಿಗರು ಕೇವಲ ಒಂದು ವ್ಯಕ್ತಿಯ ಪ್ರಭಾವವನ್ನೆ ಅವಲಂಬಿಸಿರುವುದು, ಕೇಂದ್ರದಲ್ಲಿ ಜನತಾ ಮತ್ತು ಲೋಕದಳಗಳ ಸರಕಾರಗಳ ವಿಫಲತೆ-ಇವೇ ಮೊದಲಾದ ಕಾರಣಗಳಿಂದ ಈ ರಾಜ್ಯದಲ್ಲೂ ಇಂದಿರಾ ಕಾಂಗ್ರೆಸ್ಸಿಗೆ ಜಯ ದೊರೆತಿದೆ.

ರಾಜ್ಯದಲ್ಲಿ ಎಡ ಶಕ್ತಿಗಳ ಒಗ್ಗಟ್ಟು ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ವಿಶಾಲ ತಳಹದಿಯ ಒಗ್ಗಟ್ಟು ಬೆಳೆಯುವಂತೆ ಮಾಡಲು ಪಾರ್ಟಿಯ ರಾಷ್ಟ್ರೀಯ ಧೋರಣೆಯನ್ನನುಸರಿಸಿ ರಾಜ್ಯದಲ್ಲಿ ಸಿ.ಪಿ.ಐ.(ಎಂ) ಶ್ರಮಿಸಲು ಮುಂದಾಗುವುದು. ಈ ರೀತಿಯ ಒಗ್ಗಟ್ಟು ಮತ್ತು ಜನತೆಯ ಹೋರಾಟಗಳ ಮೂಲಕ ಮಾತ್ರ ಜನರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವುದೂ, ಹಾಗೆಯೇ ಜನತೆಗೆ ಕೆಲವೊಂದು ತಾತ್ಕಾಲಿಕ ಅನುಕೂಲಗಳು ಮತ್ತು ಕಾನೂನುಗಳ ಪ್ರಯೋಜನ ಪಡೆಯುವುದು ಸಾಧ್ಯ ಎಂದು ಸಿ.ಪಿ.ಐ (ಎಂ) ನಂಬುತ್ತದೆ.

ಪಶ್ಚಿಮ ಬಂಗಾಲ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿ ಎಡರಂಗ ಮತ್ತು ಎಡ ಪ್ರಜಾಪ್ರಭುತ್ವ ರಂಗಗಳ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿದುದಕ್ಕೆ ಈ ರಾಜ್ಯಗಳ ಜನತೆಗೆ ಸೆಕ್ರೆಟಾರಿಯೆಟ್ ತನ್ನ ಅಭಿನಂದನೆಗಳನ್ನು ಕಳುಹಿಸುತ್ತದೆ.

ಚುನಾವಣಾ ಫಲಿತಾಂಶ ಮತ್ತು ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ಸಮಗ್ರವಾಗಿ ಚರ್ಚಿಸಿ, ಮುಂದಿನ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಿಸಲು ಪಕ್ಷದ ರಾಜ್ಯ ಸಮಿತಿಯು 30-1-80, 31-1-80 ಮತ್ತು

[ಕಡೆಯ ಪುಟ ನೋಡಿ]

ಕಂಪೂಚಿಯಾಕ್ಕೆ ಶುಭಾಶಯಗಳು

ಪೋಲ್‌ಪೊಟ್ ಸರಕಾರದ ದುರಾಡಳಿತದಿಂದ ವಿಮೋಚನೆಗೊಂಡ ಸವಿನೆನಪಿಗಾಗಿ ಜನವರಿ ಏಳರಂದು ಕಂಪೂಚಿಯಾ (ಕಾಂಬೋಡಿಯಾ) ದ ಜನತೆಯು ವಿಮೋಚನೆಯ ಮೊದಲ ವಾರ್ಷಿಕೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ, ಅಲ್ಲಿಯ ಜನತೆಗೂ, ಕಂಪೂಚಿಯಾದ ರಾಷ್ಟ್ರೀಯ ಐಕ್ಯರಂಗಕ್ಕೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು (ಸಿ.ಪಿ ಐ.(ಎಂ)) ತನ್ನ ಕ್ರಾಂತಿಕಾರಿ ಶುಭಾಷಯಗಳನ್ನು ಕಳುಹಿಸಿದೆ.

ತಮ್ಮ ನೆರೆಯವರಾದ ವಿಯೆತ್‌ನಾಮ್ ಮತ್ತು ಲಾವೋಸಿನ ದೇಶಪ್ರೇಮಿ ಜನತೆಯೊಡಗೂಡಿ ಕಂಪೂಚಿಯಾದ ಜನತೆಯು ರಾಷ್ಟ್ರೀಯ ವಿಮೋಚನೆಗಾಗಿ ಅಮೇರಿಕಾ ಸಾಮ್ರಾಜ್ಯಶಾಹಿಗಳ ವಿರುದ್ಧ ಧೀರ ಹೋರಾಟ ನಡೆಸಿದೆ. ಆದರೆ ಅತ್ಯಂತ ಹೆಚ್ಚಿನ ತ್ಯಾಗ, ಬಲಿದಾನಗಳಿಂದ ವಿಮೋಚನಾ ಹೋರಾಟದಲ್ಲಿ ಜಯಗಳಿಸಿದ ಮೇಲೆ, ಅಧಿಕಾರಕ್ಕೆ ಬಂದ ಹೊಸ ನಾಯಕತ್ವವು ಮಾರ್ಕ್ಸ್‌ವಾದ-ಲೆನಿನ್‌ವಾದಗಳಿಗೆ ವ್ಯತಿರಿಕ್ತವಾದ ತಪ್ಪುಧೋರಣೆಗಳನ್ನು ಅನುಸರಿಸಿದ ಫಲವಾಗಿ ಕಂಪೂಚಿಯಾದ ಸಮಾಜ ವ್ಯವಸ್ಥೆಯು ಕುಸಿಯತೊಡಗಿತು. ಲಕ್ಷಾಂತರ ಮಂದಿ ಕೊಲ್ಲಲ್ಪಟ್ಟರು. ಬದುಕಿ ಉಳಿದ ಜನರು ದುರಾಡಳಿತ ದಡಿಯಲ್ಲಿ ಗುಲಾಮರಂತೆ ಬಾಳಬೇಕಾದ ದುಃಸ್ಥಿತಿ ಬಂದೊದಗಿತು. ಎಡಪಂಥವಾದಿಗಳ ಪೊಲ್‌ಪೊಟ್ ಆಡಳಿತವು ಕಂಪೂಚಿಯಾವನ್ನು ನೆರೆಯ ಸಮಾಜವಾದಿ ರಾಷ್ಟ್ರ ವಿಯೆತ್‌ನಾಮ್ ಮೇಲೆ ಅಕ್ರಮಣ ಮಾಡಲು ಒಂದು ಮಿಲಿಟರಿ ನೆಲೆಯನ್ನಾಗಿಸಿತು.

ಕಂಪೂಚಿಯಾ ಜನತೆಯನ್ನು ಮುಕ್ತಗೊಳಿಸಲು ರಚಿತವಾದ ರಾಷ್ಟ್ರೀಯ ಐಕ್ಯರಂಗದ ನೇತೃತ್ವದಲ್ಲಿ ಸಮಾಜವಾದಿ ವಿಯೆತ್ನಾಮ್‌ನ ಸಹಾಯದಿಂದ 1979 ಜನವರಿ 7 ರಂದು ಕಂಪೂಚಿಯಾ ಜನತೆಯ ಎರಡನೆ ವಿಮೋಚನೆಯು ನಡೆಯಿತು. ದುಷ್ಟ ಪೊಲ್‌ಪೊಟ್ ಆಡಳಿತವನ್ನು ಕಿತ್ತೊಗೆದು ಕಂಪೂಚಿಯಾ ಜನತೆಯ ಗಣತಂತ್ರವನ್ನೂ ಜನತೆಯ ಕ್ರಾಂತಿಕಾರಿ ಮಂಡಳಿಯನ್ನು ಸ್ಥಾಪಿಸುವುದರ ಮೂಲಕ ಯಾವ ಉದ್ದೇಶಕ್ಕಾಗಿ ಜನತೆಯು ತ್ಯಾಗ ಬಲಿದಾನಗಳಿಂದ ಅಮೇರಿಕ ಸಾಮ್ರಾಜ್ಯಶಾಹಿಗಳವಿರುದ್ಧ ಹೋರಾಡಿದರೋ ಆ ದಿಸೆಯಲ್ಲಿ ರಾಷ್ಟ್ರವನ್ನು

[ಕಡೆಯ ಪುಟ ನೋಡಿ]

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕರ್ನಾಟಕ ರಾಜ್ಯಸಮಿತಿ ಸಭೆ

ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯಸಮಿತಿಯ ಸಭೆಯು 30-1-80, 31-1-80 ಮತ್ತು 1-2-80 ರಂದು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸೇರಲಿದೆ. ಸಮಿತಿ ಸದಸ್ಯರುಗಳು ಮತ್ತು ಖಾಯಂ ಆಹ್ವಾನಿತರು 30 ರಂದು ಬೆಳಿಗ್ಗೆ 10 ಗಂಟೆಯೊಳಗೆ ದಾಂಡೇಲಿಯನ್ನು ಸೇರಬೇಕಾಗಿ ವಿನಂತಿ. ಚಳಿ ಜೋರಾಗಿರುವುದರಿಂದ ಸಾಕಷ್ಟು ದಪ್ಪದ ಉಡುಪುಗಳು ಮತ್ತು ಹೊದೆಯುವ ಬಟ್ಟೆಗಳನ್ನು ತರಬೇಕು.

ಎಂ.ಕೆ. ಭಟ್
ಕಾರ್ಯದರ್ಶಿ
ರಾಜ್ಯಸಮಿತಿ.

ಪ. ಬಂಗಾಳ, ತ್ರಿಪುರಾ ಮತ್ತು ಕೇರಳದ ಜನತೆಗೆ ವಂದನೆಗಳು

ಎಡ ಶಕ್ತಿಗಳು ಪ್ರಬಲವಾಗಿರುವಲ್ಲಿ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಇರುವಲ್ಲಿ ಇಂದಿರಾ ಕಾಂಗ್ರೆಸ್ಸಿನ ಆಟ ನಡೆಯುದೆಂದು ಲೋಕಸಭಾ ಚುನಾವಣೆಗಳು ಮತ್ತೊಮ್ಮೆ ಸ್ಪಷ್ಟಪಡಿಸಿವೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಜಾಸತ್ತಾತ್ಮಕ ಮೌಲ್ಯಗಳ ಉಳಿವಿಗಾಗಿ, ಜನರ ಜೀವನಮಟ್ಟವನ್ನು ಸುಧಾರಿಸುವುದಕ್ಕಾಗಿ ಬದ್ಧವಾದ ಬದಲಿಯೊಂದನ್ನು ಜನತೆಯ ಮುಂದಿಡಲು ಎಲ್ಲಿ ಸಾಧ್ಯವಾಗಿದೆಯೋ ಅಲ್ಲಿ ಕಾಂಗ್ರೆಸ್(ಐ)ನ್ನು ತಡೆಯಲು ಸಾಧ್ಯವಾಗಿದೆ.

ಸಿ.ಪಿ.ಐ. (ಎಂ) ನೇತೃತ್ವದ ಪ. ಬಂಗಾಳ, ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳು ಪ್ರಜಾಸತ್ತೆಯನ್ನು ಉಳಿಸಿ ಬೆಳೆಸಿದ್ದಲ್ಲದೆ, ಜನತೆಯೊಂದಿಗೆ ಅವರ ದಿನ ನಿತ್ಯದ ಸಮಸ್ಯೆಗಳಿಗಾಗಿ ಜೊತೆ ನಿಂತದ್ದರಿಂದ, ಇತರೆ ರಾಜ್ಯಗಳಲ್ಲಿ ನಡೆದದ್ದಕ್ಕೆ ಭಿನ್ನವಾಗಿ ಜನತೆ ಮತ್ತೆ ಎಡರಂಗದ ಕರೆಗೆ ಓಗೊಟ್ಟಿದ್ದಾರೆ, ಕಾಂಗ್ರೆಸ್(ಐ)ಯನ್ನು ಸೋಲಿಸಿದ್ದಾರೆ.

ತ್ರಿಪುರಾ ರಾಜ್ಯದಲ್ಲಿ ಕಾಂಗ್ರೆಸ್(ಐ) ಸ್ಪರ್ಧಿಸಿದ್ದ ಎರಡು ಸ್ಥಾನಗಳಲ್ಲೂ ಸಿ. ಪಿ. ಐ.(ಎಂ)ನಿಂದ ಪರಾಭವಗೊಂಡಿದೆ. ಪ. ಬಂಗಾಳದಲ್ಲಿ 42 ಸ್ಥಾನಗಳ ಪೈಕಿ ಕಾಂಗ್ರೆಸ್(ಐ) 41 ಸ್ಥಾನಗಳಿಗೆ ಸ್ಪರ್ಧಿಸಿತ್ತಲ್ಲದೆ, ಒಂದು ಸ್ಥಾನದಲ್ಲಿ ಜನತಾಪಕ್ಷದ ಮುಖಂಡ ಪಿ.ಸಿ.ಸೇನ್‌ರವರಿಗೆ ಬೆಂಬಲಿಸುವುದರ ಮೂಲಕ ಸಿ.ಪಿ.ಐ.(ಎಂ)ನ್ನು ಸೋಲಿಸಬೇಕೆಂಬ ಅದರ ಉದ್ದೇಶ ವಿಫಲವಾಗಿ ಕೇವಲ ನಾಲ್ಕು ಸ್ಥಾನಗಳಲ್ಲಿ ಅದು ಜಯಗಳಿಸಿತು. ಒಂದು ಸ್ಥಾನಕ್ಕೆ ಚುನಾವಣೆಯನ್ನು ಅಭ್ಯರ್ಥಿಯೊಬ್ಬರ ಸಾವಿನಿಂದ ತಡೆಹಿಡಿಯಲಾಗಿದೆ. ಸಿ.ಪಿ.ಐ(ಎಂ) ತಾನು ಸ್ಪರ್ಧಿಸಿದ್ದ 30 ಸ್ಥಾನಗಳ ಪೈಕಿ 27ನ್ನು ಪಡೆದುಕೊಂಡಿದೆ. ಎಡರಂಗದ ಪಾಲುದಾರರಾದ ಫಾರ್ವರ್ಡ್‌ಬ್ಲಾಕ್ ಪಕ್ಷವು ನಾಲ್ಕು ಸ್ಥಾನಗಳಿಗೆ ಸ್ಪರ್ಧಿಸಿ, ಮೂರು ಸ್ಥಾನಗಳನ್ನು ಗೆದ್ದುಕೊಂಡಿದೆ. ಕ್ರಾಂತಿಕಾರಿ ಸೋಷಲಿಸ್ಟ್ ಪಕ್ಷ ಸ್ಪರ್ಧಿಸಿದ್ದ ನಾಲ್ಕು ಸ್ಥಾನಗಳಲ್ಲೂ ಜಯಗಳಿಸಿದೆ. ಎಡರಂಗದ ಬೆಂಬಲಪಡೆದ ಸಿ.ಪಿ.ಐ.ಕೂಡಾ ಚುನಾವಣೆಗೆ ನಿಲ್ಲಿಸಿದ್ದ ಮೂರು ಸ್ಥಾನಗಳಲ್ಲೂ ಯಶಸ್ಸು ಸಾಧಿಸಿದೆ.

ಕೇರಳ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಪುನರ್ ಹೊಂದಾಣಿಕೆಯಿಂದ ಅಸ್ತಿತ್ವಕ್ಕೆ ಬಂದ ಹೊಸ ಎಡ ಮತ್ತು ಪ್ರಜಾಸತ್ತಾತ್ಮಕ ಕೂಟದಲ್ಲಿ ಸಿ ಪಿ.ಐ. (ಎಂ), ಕಾಂಗ್ರೆಸ್(ಯು), ಸಿ ಪಿ ಐ., ಆರ್. ಎಸ್. ಪಿ. ಕೇರಳ ಕಾಂಗ್ರೆಸ್ಸಿನ ಎರಡು ಗುಂಪುಗಳು ಹಾಗೂ ಅಖಿಲ ಭಾರತ ಮುಸ್ಲಿಂಲೀಗ್ ಪಕ್ಷಗಳು ಒಂದಾಗಿ ಕಾಂಗ್ರೆಸ್(ಐ) ಮತ್ತದರ ಕೂಟ ಪಕ್ಷಗಳಾದ ಜನತಾ, ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್, ಕೇರಳ ಕಾಂಗ್ರೆಸ್ (ಜೋಸೆಫ್) ಗುಂಪು, ನಾಯರ್ ಸರ್ವೀಸ್ ಸೊಸೈಟಿಯ ಎನ್.ಡಿ ಪಿ. ಎಳವರ ಜಾತೀಯ ಸಂಘಟನೆಯಾದ ಎಸ್. ಆರ್. ಪಿ. ಪಕ್ಷಗಳನ್ನು ಬಹುಪಾಲು ಸ್ಥಾನಗಳಲ್ಲಿ ಸೋಲಿಸಲಾಯಿತು. ಇಂದಿರಾ ಕಾಂಗ್ರೆಸ್ ಐದು ಸ್ಥಾನಗಳನ್ನು, ಮುಸ್ಲಿಂಲೀಗ್ ಎರಡು ಹಾಗೂ ಕೇರಳ ಕಾಂಗ್ರೆಸ್(ಜೋಸೆಫ್ ಗುಂಪು) ಒಂದು ಸ್ಥಾನವನ್ನು ಪಡೆದಿವೆ. ಎಡ ಮತ್ತು ಪ್ರಜಾಸತ್ತಾತ್ಮಕ ರಂಗ 12 ಸ್ಥಾನಗಳನ್ನು ಪಡೆಯಿತು. ಸಿ.ಪಿ.ಐ. (ಎಂ) ಸ್ಪರ್ಧಿಸಿದ್ದ ಏಳು ಸ್ಥಾನಗಳ ಪೈಕಿ ಆರು ಸ್ಥಾನಗಳಲ್ಲಿ ಜಯಗಳಿಸಿದೆ. ಕಾಂಗ್ರೆಸ್ (ಯು) ಆರು ಸ್ಥಾನಗಳ ಪೈಕಿ ಮೂರು ಸ್ಥಾನಗಳನ್ನು, ಸಿ.ಪಿ.ಐ. ಮೂರು ಸ್ಥಾನಗಳ ಪೈಕಿ ಎರಡು ಸ್ಥಾನಗಳನ್ನು ಹಾಗೂ ಕೇರಳ ಕಾಂಗ್ರೆಸ್ (ಮಣಿಗುಂಪು) ಒಂದು ಸ್ಥಾನದಲ್ಲೂ ಗೆಲುವನ್ನು ಪಡೆದಿದ್ದಾರೆ. ಆರ್. ಎಸ್. ಪಿ. ಮತ್ತು ಅಖಿಲ ಭಾರತ ಮುಸ್ಲಿಂಲೀಗ್ ಸ್ಪರ್ಧಿಸಿದ್ದ ತಲಾ ಒಂದು ಸ್ಥಾನಗಳಲ್ಲಿ ಸೋತವು.

ಲಭ್ಯವಾದಷ್ಟು ಚುನಾವಣಾ ಫಲಿತಾಂಶಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ.

ಪಶ್ಚಿಮ ಬಂಗಾಳ : ಸಿ. ಪಿ. ಐ. (ಎಂ) ವಿಜೇತರು:

1 ಜಲಪೈಗುರಿ : ಸುಭೋದ್ ಸೇನ್, 90,396 ಓಟುಗಳಿಂದ ಕಾಂಗ್ರೆಸ್ (ಐ) ಅಭ್ಯರ್ಥಿಯ ಮೇಲೆ ಜಯಗಳಿಸಿದ್ದಾರೆ.

2. ಡಾರ್ಜಿಲಿಂಗ್ : ಆನಂದ ಪಾಠಕ್, ಕಾಂಗ್ರೆಸ್ (ಐ) ಮೇಲೆ 18,161 ಓಟುಗಳ ಜಯ.

3, ಜಂಗೀಪುರ : ಜೈನಲ್ ಆಬ್‌ದಿನ್, 72,826 ಓಟುಗಳಿಂದ ಕಾಂಗ್ರೆಸ್ (ಐ) ಅಭ್ಯರ್ಥಿಯ ವಿರುದ್ಧ ಜಯ.

4, ಮುರ್ಷಿದಾಬಾದ್ : ಮಸೂದಲ್ ಹುಸೇನ್ ಸ್ಯಯದ್, 68,000 ಓಟುಗಳಿಂದ ಕಾಂಗ್ರೆ ವಿರುದ್ಧ ಜಯ.

5. ಕೃಷ್ಣಾನಗರ್ : ರೇಣುಪಾದದಾಸ್, 66,191ಓಟುಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

6. ನವದ್ವೀಪ (S.C.) : ಬಿಭಾಘೋಷ್ ಗೋಸ್ವಾಮಿ, 83,465 ಓಟುಗಳಿಂದ ಕಾಂಗ್ರೆ ಮೇಲೆ ಜಯ.

7. ಮಥುರಾಪುರ (S.C.) : ಮುಕುಂದುರಾವ್ ಮಂಡಲ್, 77,842 ಮತಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

8. ಡೈಮಂಡ್ ಹಾರ್ಬರ್ : ಜ್ಯೋತಿರ್ಮಯ ಬಸು, 1,45,932 ಮತಗಳ ಅಂತರ ಕಾಂಗ್ರೆ ಮೇಲೆ ಜಯ.

9. ಜಾಧವಪುರ : ಸೋಮನಾಥ್ ಚಟರ್ಜಿ, 1,46,115 ಮತಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

10. ಬ್ಯಾರೆಕ್‌ಪುರ : ಮೊಹಮ್ಮದ್ ಇಸ್ಮಾಯಿಲ್, 86,846 ಮತಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

11. ಡಂಡಂ : ನಿರೇನ್‌ಘೋಷ್, 1,65,658 ಮತಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

12. ಕಲಕತ್ತಾ ಉತ್ತರ-ಪೂರ್ವ : ಸುನೀಲ್ ಮೊಯಿತ್ರಾ, 27,069 ಮತಗಳ ಅಂತರದಿಂದ ಕಾಂಗ್ರೆ ಮೇಲೆ ಜಯ.

ಅಭ್ಯರ್ಥಿಯ ಹೆಸರು	ಮತಗಳ ಅಂತರ	ಹತ್ತಿರದ ಪ್ರತಿಸ್ಪರ್ಧಿ
13. ಕಲಕತ್ತಾ ದಕ್ಷಿಣ: ಸತ್ಯಸಾಧನ ಚಕ್ರವರ್ತಿ	37,000	ಕಾಂಗ್ರೆಸ್ (ಐ)
14. ಹೌರಾ : ಸಮರ್ ಮುಖರ್ಜಿ	1,66,61[illegible]	"
15. ಉಲುಬೇರಿಯಾ : ಹನ್ನನ್ ಮೊಲ್ಲಾ	1,41,078	"
16. ಹೂಗ್ಲಿ:ರೂಪ್‌ಚಂದ್‌ಪಾಲ್	78,398	"
17. ಆರಾಮ್‌ಬಾಗ್ : ಬಿಜಯ-ಕೃಷ್ಣ ಮೋದಕ್	42,991	ಜನತಾಪಕ್ಷದ-ಪಿ. ಸಿ. ಸೇನ್
18. ತಾಮ್ಲುಕ್: ಸತ್ಯಗೋಪಾಲ್ ಮಿಶ್ರ	1,23,051	ಕಾಂಗ್ರೆಸ್ (ಐ)
19. ಕಾಂಟಾಯ್ : ಸುಧೀರ್ ಕುಮಾರ್ ಗಿರಿ	89,800	"
20. ಝರ್‌ಗ್ರಾಮ್(ಮೀಸಲು) : ಹಷ್ದ ಮತಿಲಾಲ್	98,169	"
21. ಬಾಂಕುರ : ಬಸುದೇವ ಆಚಾರ್ಯ	43,911	"
22. ವಿಷ್ಣುಪುರ (ಮೀಸಲು) : ಅಜಿತ್‌ಕುಮಾರ್ ಸಾ[illegible]	1,10,200	"
23. ದುರ್ಗಾಪುರ (ಮೀಸಲು) : ಕೃಷ್ಣಚಂದ್ರ ಹಲ್ದಾರ್	97,187	"
24. ಬರ್ದ್ವಾನ್ : ಸುಶೀಲ್ ಕುಮಾರ್ ಭಟ್ಟಾಚಾರ್ಯ	1,19,727	"
25. ಬೋಲ್‌ಪುರ : ಸರ್‌ದೀಶ್ ರಾಯ್	68,629	" ಪ್ರಣವಕುಮಾರ ಮುಖರ್ಜಿ
26. ಕಟ್ವಾ : ಸೈಪುದೀನ್‌ಚೌಧರಿ	1,21,160	ಕಾಂಗ್ರೆಸ್ (ಐ)
27. ಬಿರ್‌ಭೂಮ್ : ಗಧಾದರ ಸಹಾ	40,663	"
ತ್ರಿಪುರಾ :		
28. ತ್ರಿಪುರಾ ಪಶ್ಚಿಮ : ಅಜೋಯ್ ಬಿಸ್ವಾಸ್	55,345	"
29. ತ್ರಿಪುರಾ ಪೂರ್ವ (ಮೀಸಲು) ಬಾಜುಜಿನ್ ರಿಯಾಂಗ್	93,000	ಅಮ್ರ ಬಂಗಾಲಿ

(8ನೇ ಪುಟ ನೋಡಿ)

ಅಸ್ಸಾಂ : ಪರಿಸ್ಥಿತಿ ಮುಂದುವರಿದರೆ ದೇಶಕ್ಕೆ ಗಂಡಾಂತರ

ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಡೆಗಣಿಸಿ ಮುಂದುವರೆಯುತ್ತಿರುವ ಅಸ್ಸಾಮಿನ ಬಿಕ್ಕಟನ್ನು ಕುರಿತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪೊಲಿಟ್‌ಬ್ಯೂರೋ ತನ್ನ ಅತೀವ ಆತಂಕವನ್ನು ವ್ಯಕ್ತಪಡಿಸಿದೆ. ಗಲಭೆಗಳಿಂದಾಗಿ ಅಸ್ಸಾಮಿನ ಜನತೆ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಲೋಕಸಭಾ ಚುನಾವಣೆಯೇ ಅಲ್ಲಿ ನಡೆಯಲಿಲ್ಲ. ಇದೇ ಮೊದಲ ಬಾರಿಗೆ ಇಡೀ ಒಂದು ರಾಜ್ಯವನ್ನು ಚುನಾವಣೆಗೆ ಹೋಗದಂತೆ ತಡೆಹಿಡಿಯಲಾಗಿದೆ, ದೇಶದ ಇತರೆ ಭಾಗಗಳಲ್ಲಿ ಜನ ಮತಕಟ್ಟೆಗೆ ಹೋದಂತೆ ರಾಜ್ಯದಲ್ಲಿ ಮತಕಟ್ಟೆಗಳಿಗೆ ಜನ ಹೋಗದಂತೆ ತಡೆಯಲಾಗಿದೆ.

ಅಸ್ಸಾಂ ಜನತೆಯನ್ನು ಬಾಧಿಸುತ್ತಿರುವ ವಿದೇಶಿ ವಲಸೆಗಾರರ ಸಮಸ್ಯೆಯು ಆಪದ[illegible] ದೇಶದ ಐಕ್ಯತೆಗೆ ಭಂಗತಂದು ಕೆಟ್ಟ ರೀತಿಯಲ್ಲಿ ಪ್ರಾದೇಶಿಕತೆ, ಅಂಥ ಭಾವನೆಗಳಿಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಮತದಾರರ ಪಟ್ಟಿಯಿಂದ ವಿದೇಶಿಯರ ಹೆಸರುಗಳನ್ನು ತೆಗೆದುಹಾಕಬೇಕೆಂದು ಪ್ರಾರಂಭವಾದ ಚಳುವಳಿ ಈಗ ಅಲ್ಪಸಂಖ್ಯಾತರಾದ ಮುಸ್ಲಿಮರು ಮತ್ತಿತರ ಪ್ರಜೆಗಳ ವಿರುದ್ಧ, ಅಸ್ಸಾಮಿನಲ್ಲಿ ನೆಲೆಸಿರುವ ಬಂಗಾಳಿ ಮತ್ತು ಬಿಹಾರಿಗಳ ವಿರುದ್ಧ ಕೇಂದ್ರೀಕೃತವಾಗುತ್ತಿದೆ. ಇದು ಭಾರತೀಯ ಪೌರತನದ ಬಹಿರಂಗ ಅವಹೇಳನ ಹಾಗೂ ಅಸ್ಸಾಮೇತರ ಭಾರತೀಯ ಪ್ರಜೆಗಳಿಗೆ ಓಟು ಮಾಡುವ ಅವರ ಹಕ್ಕನ್ನು ನಿರಾಕರಿಸುವುದಾಗಿದೆ. ಇದಕ್ಕೆ ಮೊದಲು ಅಸ್ಸಾಂ ಮತ್ತಿತರ ರಾಜ್ಯಗಳಲ್ಲಿ "ಮಣ್ಣಿನ ಮಕ್ಕಳಿಗೆ" ಮಾತ್ರ ಉದ್ಯೋಗವೆಂದು ಚಳುವಳಿಗಳು ನಡೆದದ್ದನ್ನು ನೆನಪಿಡಬೇಕು. ಈಗ ಓಟನ್ನು ಕೂಡಾ ಬರೀ ಸ್ಥಳೀಯರು ಮಾತ್ರ ಮಾಡಬೇಕು ಎನ್ನುವುದು ಭಾರತೀಯರ ಸಮಗ್ರತೆಯ ಅಂತ್ಯದ ಕುರುಹು ಎಂದು ಹೇಳಬಹುದು.

ವಿಚಾರಶೀಲ ಜನತೆ ಹಾಗೂ ಎಲ್ಲಾ ರಾಜಕೀಯ ಪಕ್ಷಗಳು ದೇಶಕ್ಕೆ ಗಂಡಾಂತರಕಾರಿಯಾದ ಈ ಅಪಾಯವನ್ನು ಎದುರಿಸಲು ಒಂದಾಗಬೇಕಲ್ಲದೆ, ಪ್ರಸ್ತುತ ಚಳುವಳಿಯ ನಿಜವಾದ ಉದ್ದೇಶವನ್ನು ಅಸ್ಸಾಂ

(8ನೇ ಪುಟ ನೋಡಿ)

ಚುನಾವಣಾ ಫಲಿತಾಂಶ ಮತ್ತು ನಂತರದ ಸ್ಥಿತಿ

—ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಹೇಳಿಕೆ.

ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ನ ಪ್ರಚಂಡ ವಿಜಯ ಎಲ್ಲರನ್ನೂ ಆಶ್ಚರ್ಯಗೊಳಿಸಿದೆ. ಏಕೆಂದರೆ ಯಾವ ಬೂರ್ಜ್ವಾ-ಜಮೀನುದಾರರ ನೇತೃತ್ವದ ಪಕ್ಷಕ್ಕೂ ಬಹುಮತ ಪಡೆಯುವುದು ಸಾಧ್ಯವಿಲ್ಲವೆಂದು ಈ ಮೊದಲು ಭಾವಿಸಲಾಗಿತ್ತು. ಕಾಂಗ್ರೆಸ್ (ಐ)ನ ಈ ಗೆಲುವಿಗೆ ಬೂರ್ಜ್ವಾ-ಜಮೀನುದಾರರ ವಿರೋಧ ಪಕ್ಷಗಳು ಒಡೆದು ಹೋದದ್ದು ಮತ್ತು ಜನತೆಯಿಂದ ದೂರವಾದದ್ದು.

ಇದಕ್ಕೆ ವಿರುದ್ಧವಾಗಿ ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಪಕ್ಷವನ್ನು ಸಂಪೂರ್ಣವಾಗಿ ಸೋಲಿಸಲಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ. ಬಂಗಾಳ, ತ್ರಿಪುರಾದ ಜನತೆ, ಎಡಪಕ್ಷಗಳು ಹಾಗೂ ಪಕ್ಷದ ಕಾರ್ಯಕರ್ತರನ್ನು ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಿದ್ದಕ್ಕಾಗಿ ಅಭಿನಂದಿಸುತ್ತದೆ. ನಮ್ಮ ಪಕ್ಷದ ನೇತೃತ್ವದ ಎಡಪಕ್ಷಗಳ ಸಂಯುಕ್ತರಂಗ ಸರ್ವಾಧಿಕಾರಿ ಶಕ್ತಿಗಳು ಮತ್ತು ಜಾತೀಯವಾದಿ ಶಕ್ತಿಗಳ ವಿರುದ್ಧ ಗಟ್ಟಿ ಬಂಡೆಯಂತೆ ಬಲವಾಗಿ ನಿಂತಿದೆ.

ಎಡ ಹಾಗೂ ಪ್ರಜಾಸತ್ತಾತ್ಮಕ ರಂಗಕ್ಕೆ ಬಹುಪಾಲು ಸ್ಥಾನಗಳನ್ನು ದೊರಕಿಸಿಕೊಟ್ಟ ಕೇರಳ ರಾಜ್ಯದ ಜನತೆಗೆ, ಎಡ-ಪ್ರಜಾಸತ್ತಾತ್ಮಕರಂಗದ ಪಕ್ಷಗಳಿಗೆ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಿಗೆ ಸಹಾ ಪೊಲಿಟ್‌ಬ್ಯೂರೋ ಅಭಿನಂದಿಸಿದೆ.

ಇಂದಿರಾ ಕಾಂಗ್ರೆಸ್‌ಗೆ ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತ ಲಭಿಸಿದೆಯಲ್ಲದೆ, ಅಧಿಕಾರಕ್ಕಾಗಿ ಪ್ರಯತ್ನಿಸುತ್ತಿದ್ದ ಇತರೆ ಎರಡು ಬೂರ್ಜ್ವಾ ಜಮೀನುದಾರರ ಪಕ್ಷಗಳು ಸಂಪೂರ್ಣವಾಗಿ ಸೋತಿವೆ. ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳನ್ನು ಬಿಟ್ಟರೆ ಬೇರೆ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಗೆ ಪ್ರತಿಯಾದ ಶಕ್ತಿಯನ್ನು ಜನತೆಯ ಮುಂದೆ ಇಡಲು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಇಂದಿರಾ ಕಾಂಗ್ರೆಸ್‌ನವರು ಜನತೆಯನ್ನು ತಮ್ಮತ್ತ ಆಕರ್ಷಿಸುವುದರಲ್ಲಿ ಸಫಲರಾದರು.

ಬೂರ್ಜ್ವಾ-ಜಮೀನುದಾರರ ವಿರೋಧ ಪಕ್ಷಗಳ ಸಂಘಟನೆ ಕುಸಿದು, ಒಳಜಗಳಗಳ ಕಾರಣದಿಂದ ಜನತೆಯ ವಿಶ್ವಾಸವನ್ನು ಕಳೆದುಕೊಂಡರು. ಜನತಾಪಕ್ಷವು ಚುನಾವಣೆಗಳ ಸಮಯದಲ್ಲಿ ಹಾಗೂ ಮೊದಲು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡಲು ತನ್ನ ಗಮನವನ್ನು ಕೇಂದ್ರೀಕರಿಸುವ ಬದಲು, ತನ್ನೆಲ್ಲಾ ಶಕ್ತಿಯನ್ನು ಪಕ್ಷಾಂತರಿಗಳ ವಿರುದ್ಧ ಹೋರಾಡುವುದರಲ್ಲಿಯೇ ಕಳೆಯಿತು. ಜನತಾ ಸರಕಾರದ ಪ್ರತಿಯೊಂದು ಬಡ್ಜೆಟ್ ಮಂಡನೆಯೊಂದಿಗೆ ಜನಗಳ ಆರ್ಥಿಕ ಸಂಕಷ್ಟಗಳೂ ಹೆಚ್ಚಾಗುತ್ತಾ ಹೋದುವು. ಬೆಲೆಏರಿಕೆಯಿಂದಾಗಿ ಅಗತ್ಯ ವಸ್ತುಗಳಾದ ಸಕ್ಕರೆ, ತರಕಾರಿ, ಈರುಳ್ಳಿ ಮುಂತಾದುವು ಶ್ರೀಸಾಮಾನ್ಯನ ಕೈಗೆ ಎಟುಕದಾಯಿತು. ಉಸ್ತುವಾರಿ ಸರಕಾರದ ಐದು ತಿಂಗಳ ಅವಧಿಯಲ್ಲಿ ಬೆಲೆಗಳು ಮತ್ತಷ್ಟು ಗಗನಕ್ಕೆ ಏರಿದವು. ಜನಗಳ ತೊಂದರೆಗಳನ್ನು ಕೇಳುವವರೇ ಇಲ್ಲವಾಯಿತು. ಬದಲಿಗೆ ಪ್ರತಿಭಟನೆಗಳನ್ನು ನಿರ್ದಾಕ್ಷಿಣ್ಯವಾಗಿ ತುಳಿಯಲಾಯಿತು. ದಿನನಿತ್ಯದ ಆಡಳಿತ ವ್ಯವಹಾರಗಳನ್ನು ಕೂಡಾ ನೋಡಿಕೊಳ್ಳಲು ವಿಫಲವಾದ ಜನತಾ ಸರಕಾರ ಜನತೆಯನ್ನು ಸಮಾಜಘಾತುಕರಿಂದ ರಕ್ಷಿಸಲು ಸಹಾ ಸಾಧ್ಯವಾಗಲಿಲ್ಲ. ಡಕಾಯಿತಿ, ರೈಲು ದರೋಡೆ, ರೌಡಿಗ್ಯಾಂಗ್‌ಗಳ ಅತಿಕ್ರಮಣಗಳು ಹೆಚ್ಚಾಗುತ್ತಾ ಹೋದವು. ದಿನನಿತ್ಯ ಜನತಾಪಕ್ಷದ ಮುಖಂಡರು ಪರಸ್ಪರ ಹೊಡೆದಾಡುವುದನ್ನು ಕಂಡ ಜನಗಳಿಗೆ ಶ್ರೀಮತಿ ಇಂದಿರಾಗಾಂಧಿಯವರ ಸುಭದ್ರ ಸರಕಾರದ ಘೋಷಣೆ ಹಿಡಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಕಾಂಗ್ರೆಸ್ (ಐ) ವಿಜಯಕ್ಕೆ ಜನತಾ ಪಕ್ಷ ಅನೇಕ ರೀತಿಗಳಲ್ಲಿ ಸಹಾಯ ಮಾಡಿತು. ಆರೆಸ್ಸೆಸ್-ಜನಸಂಘ ಧೋರಣೆಗಳಿಗೆ ಒಳಗಾದ ಜನತಾಪಕ್ಷ ಅಲ್ಪಸಂಖ್ಯಾತರಾದ ಮುಸ್ಲಿಮರಿಂದ ದೂರವಾದದ್ದರಲ್ಲಿ ಆಶ್ಚರ್ಯವೇನಿಲ್ಲ. ಭೂ ಮಾಲಕರ ದಾಳಿಗಳು ಹೆಚ್ಚಾಗುತ್ತಾ ಹೋದದ್ದರಿಂದ ಹರಿಜನರೂ ಜನತಾಪಕ್ಷದಿಂದ ದೂರವಾದರು. ಜಗಜೀವನರಾಮರ ಹೆಸರನ್ನು ಬಳಸಿಕೊಂಡು ಗೆಲ್ಲುವ ಜನತಾಪಕ್ಷದ ತಂತ್ರ ಸಫಲವಾಗಲಿಲ್ಲ. 1977ರ ರಾಜ್ಯ ವಿಧಾನಸಭಾ ಚುನಾವಣೆಗಳ ಸಮಯದಲ್ಲಿಯೇ ಹರಿಜನರು ಜನತಾಪಕ್ಷದಿಂದ ದೂರವಾಗಿದ್ದರು, ಅಲಿಘಡ ಮತ್ತು ಜೆಮ್‌ಷೆಡ್‌ಪುರಗಳ ಮತೀಯ ಗಲಭೆಗಳ ನಂತರ ಮುಸ್ಲಿಮರೂ ಪಕ್ಷದಿಂದ ದೂರ ಹೋದರು. ಜಾತ್ಯಾತೀತತೆಯನ್ನು ಕೈಬಿಟ್ಟು ಪ್ರಜಾಸತ್ತಾತ್ಮಕ ಪಕ್ಷವನ್ನು ಕಟ್ಟುವುದು ಸಾಧ್ಯವಿಲ್ಲವೆಂಬುದನ್ನು ಜನತಾಪಕ್ಷದಲ್ಲಿರುವ ಎಡ ಹಾಗೂ ಸಮಾಜವಾದಿ ಶಕ್ತಿಗಳು ಅರಿಯಬೇಕು.

ಜನತಾ ಪಕ್ಷ ಮಾತ್ರವಲ್ಲದೆ, ಲೋಕದಳ ಅರಸು ಕಾಂಗ್ರೆಸ್ ಪಕ್ಷಗಳೂ ಇಂದಿರಾ ಗಾಂಧಿಯವರ ಜಯಕ್ಕೆ ಕಾರಣರಾಗಿದ್ದಾರೆ. ಸರ್ವಾಧಿಕಾರವನ್ನು ಸೋಲಿಸಲು ದೃಢ ನಿರ್ಧಾರ ಕೈಗೊಳ್ಳುವ ಬದಲು, ಅವು ಸಹಾ ತಮ್ಮತಮ್ಮೊಳಗೆ ಹೊಡೆದಾಡಲು ಪ್ರಾರಂಭಿಸಿದವು. ಇದರಿಂದ ಜನತೆ ಈ ಎರಡೂ ಪಕ್ಷಗಳನ್ನು ಬದಲಿ ಸರಕಾರ ರಚಿಸಲು ಸಾಧ್ಯವಿರುವ ಪರ್ಯಾಯ ಪಕ್ಷಗಳೆಂದು ಪರಿಗಣಿಸಲೇ ಇಲ್ಲ. ತತ್ವರಹಿತ ಪಕ್ಷಾಂತರ, ಗುಂಪುಗಾರಿಕೆ, ಸ್ಥಾನಗಳ ಬಗ್ಗೆ ಅತಿಶಯೋಕ್ತಿಯ ಹೇಳಿಕೆಗಳು, ಎಲ್ಲದಕ್ಕಿಂತ ಮಿಗಿಲಾಗಿ ಜನತೆಯ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯವನ್ನು ಕಂಡ ಜನತೆ ಉಸ್ತುವಾರಿ ಸರಕಾರ ನಡೆಸಿದ ಎರಡು ಪಕ್ಷಗಳನ್ನೂ ತಿರಸ್ಕರಿಸಿದರು. ಕಾರ್ಮಿಕವರ್ಗದ ಬಗ್ಗೆ, ಕೆಲಸಗಾರರ ಬಗ್ಗೆ ಲೋಕದಳದ ಮುಖಂಡರು ನೀಡಿದ ಹೇಳಿಕೆಗಳು ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಿತು.

ಕಾಂಗ್ರೆಸ್ (ಐ)ಗೆ ನೀಡಿದ ಮತ, ಜನತೆ ಜನತಾಪಕ್ಷದ ದಿವಾಳಿಖೋರ ಆಡಳಿತದ ವಿರುದ್ಧ ನೀಡಿದ ಮತ. ನಮ್ಮ ಪಕ್ಷ ಹಾಗೂ ನಮ್ಮ ಪ್ರತಿನಿಧಿಗಳಾದ ಪ. ಬಂಗಾಳ, ತ್ರಿಪುರಾದ ಮುಖ್ಯಮಂತ್ರಿಗಳು ಹಾಗೂ ಸಂಸತ್ ಸದಸ್ಯರು, ಜನತಾಪಕ್ಷದ ಜನವಿರೋಧಿ ನೀತಿಗಳು ಇಂದಿರಾ ಕಾಂಗ್ರೆಸ್‌ಗೆ ಅದರ ವಿರುದ್ಧ ಯುದ್ಧಸಾರಲು ಮದ್ದು ಗುಂಡುಗಳ ಸರಬರಾಜು ಮಾಡಿದಂತೆ ಆಗುತ್ತಿರುವುದರಿಂದ, ಜನಪರವಾದ ನೀತಿಯನ್ನೂ ಅನುಸರಿಸಲು ಮಾಡಿದ ಮನವಿಗಳು ವಿಫಲವಾದವು.

ಚುನಾವಣೆಗಳು, ಜನತಾ ಪಕ್ಷ ಮತ್ತದರ ಅಂಗಪಕ್ಷಗಳು ಮೂರು ವರ್ಷಗಳ ಅವಧಿಯಲ್ಲಿ ಜನಗಳಿಂದ ಎಷ್ಟು ದೂರವಾಗಿದ್ದಾರೆ ಎಂಬುದನ್ನು ತೋರಿಸಿವೆ. ಅದರಲ್ಲೂ ರಾಜ್ಯ ಸರಕಾರಗಳನ್ನು ತಮ್ಮ ಪಕ್ಷದ ಕ್ಷೇತ್ರದಲ್ಲಿ ಇಟ್ಟುಕೊಂಡು, ಜನಗಳಿಗೆ ನೇರವಾಗಿ ಸೇವೆ ಮಾಡಲು ಅವಕಾಶವಿರುವ ರಾಜ್ಯಗಳಲ್ಲಿ ಅದಕ್ಕಾಗಿರುವ ಸೋಲು ಗಮನಾರ್ಹವಾದದ್ದು. ಇದರಿಂದ ರಾಜ್ಯಗಳಲ್ಲೂ ಜನತಾಪಕ್ಷದ ಮುಖಂಡರು ಜನಸಾಮಾನ್ಯರ ಸಮಸ್ಯೆಗಳಿಗೆ ಸರಿಯಾದ ಗಮನ ಕೊಟ್ಟಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡ ಶ್ರೀಮತಿ ಇಂದಿರಾಗಾಂಧಿಯವರು, ತನ್ನಿಂದ ಮಾತ್ರ ಕೇಂದ್ರದಲ್ಲಿ ಸುಭದ್ರ-ಸಮರ್ಥ ಸರಕಾರವನ್ನು ಸ್ಥಾಪಿಸಲು ಸಾಧ್ಯವೆಂದು ನಂಬಿಕೆ ಮೂಡಿಸಿದರು. ಮೂರು ರಾಜ್ಯಗಳನ್ನು ಬಿಟ್ಟು ಬೇರೆ ರಾಜ್ಯಗಳಲ್ಲಿ ಸಾಕಷ್ಟು ಬಲವಾಗಿಲ್ಲದಿರುವುದರಿಂದ ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳು ಕೇಂದ್ರದಲ್ಲಿ ಸರಕಾರ ರಚನೆ ಮಾಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಜನ ಸಹಜವಾಗಿ ಕಾಂಗ್ರೆಸ್ (ಐ)ಗೆ ಒಲಿದರು.

ಇಂದಿರಾಗಾಂಧಿಯವರನ್ನು ಗೆಲ್ಲಿಸಿದ್ದಾರೆಂದ ಮಾತ್ರಕ್ಕೆ ಜನತೆ ಶ್ರೀಮತಿ ಇಂದಿರಾರವರ ತುರ್ತು ಪರಿಸ್ಥಿತಿ ಅಕೃತ್ಯಗಳಿಗೆ ಒಪ್ಪಿಗೆ ನೀಡಿದ್ದಾರೆಂದು ಅರ್ಥವಲ್ಲ. ಜನತಾಪಕ್ಷವನ್ನು ತಿರಸ್ಕರಿಸುವ ಭರದಲ್ಲಿ ಜನತೆ ಇಂದಿರಾ ಕಾಂಗ್ರೆಸ್‌ನ ಬಲೆಗೆ ಬಿದ್ದಿದ್ದಾರೆ.

ಚುನಾವಣಾ ವಿಜಯದಿಂದ ಪ್ರೋತ್ಸಾಹಿತರಾಗಿ ಸರ್ವಾಧಿಕಾರಿ ಶಕ್ತಿಗಳು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಬಹುದು. ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟು, ಬೆಲೆಗಳ ಏರಿಕೆಯಿಂದ ಜನಗಳಲ್ಲಿ ಉಂಟಾಗುವ ಅತೃಪ್ತಿಯನ್ನು ಉಪಯೋಗಿಸಿಕೊಂಡು ಇಂದಿರಾ ಕಾಂಗ್ರೆಸ್ ಸರಕಾರ ಶಾಂತಿ ಮತ್ತು ಸುವ್ಯವಸ್ಥೆ ಹೆಸರಿನಲ್ಲಿ, ಸುಭದ್ರ ಸರಕಾರದ ನೆಪದಲ್ಲಿ ಕಾರ್ಮಿಕವರ್ಗ ವಿರೋಧಿ, ಜನವಿರೋಧಿ ನೀತಿಗಳನ್ನು ಅನುಸರಿಸುತ್ತದೆ. ಎಲ್ಲಾ ವಿರೋಧ ಪಕ್ಷಗಳು, ಅದರಲ್ಲೂ ಸರ್ವಾಧಿಕಾರದ ವಿರುದ್ಧ ಮುಲಾಜಿಲ್ಲದ ಹೋರಾಟ ನಡೆಸುತ್ತಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಹೊಸ ಅಪಾಯಕಾರಿ ಬೆಳವಣಿಗೆಯನ್ನು ಅರಿತು ಎಚ್ಚರಗೊಳ್ಳಬೇಕು. ದೇಶದಲ್ಲಿ ಪ್ರಜಾಸತ್ತೆ, ಜಾತ್ಯಾತೀತತೆಯನ್ನು ಉಳಿಸಲು ಇಮ್ಮಡಿ ಶಕ್ತಿಯಿಂದ ಕೆಲಸ ಮಾಡಬೇಕು.

ಚುನಾವಣೆಯಲ್ಲಿ ಜನಗಳು ನೀಡಿದ ಬಹುಮತವನ್ನು ಏಕವ್ಯಕ್ತಿಯ ಅಧಿಕಾರಕ್ಕಾಗಿ ನೀಡಿದ ಪರವಾನಗಿ ಎಂದು ಭಾವಿಸಿ ಇಂದಿರಾ ಕಾಂಗ್ರೆಸ್ ಸರಕಾರ ಹಿಂದಿನಂತೆ ಜನಪರ ಕಾರ್ಯಗಳಿಗೆ ವಿರುದ್ಧವಾಗಿ ನಿಲ್ಲಬಹುದು. ತುರ್ತು ಪರಿಸ್ಥಿತಿಯ ಕುಖ್ಯಾತ ಗುಂಪು ಸಹಾ ಆಯ್ಕೆಯಾಗಿ ಬಂದಿರುವುದು ಅಪಾಯವನ್ನು ಹೆಚ್ಚಿಸಿದೆ. ದೇಶ ಮತ್ತೊಮ್ಮೆ ಕವಲು ದಾರಿಯಲ್ಲಿದೆ. ಈ ಅಪಾಯವನ್ನು ಎದುರಿಸಲು ಪ್ರಜಾಸತ್ತಾತ್ಮಕ ಪಕ್ಷಗಳು ಸದಾ ಎಚ್ಚರದಿಂದ ಇರಬೇಕು. ಜನಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಾಗುವ ಪ್ರತಿಯೊಂದು ಧಾಳಿಯನ್ನೂ ಎದುರಿಸಲು ಸಿದ್ಧವಾಗಿರಬೇಕು.

ಈ ಚುನಾವಣೆಯಿಂದ ಸ್ಪಷ್ಟವಾಗಿರುವ ಒಂದು ಸಂಗತಿಯೆಂದರೆ ಇಂದಿರಾ ಕಾಂಗ್ರೆಸ್‌ಗೆ ಪ್ರತಿಯಾದ ಸರಿಯಾದ ವಿರೋಧ ಪಕ್ಷವಿದ್ದರೆ ಜನತೆ ಅದನ್ನು ಬೆಂಬಲಿಸುತ್ತದೆ. ಇದನ್ನು ನಾವು ಕೇರಳ, ಬಂಗಾಳ ಮತ್ತು ತ್ರಿಪುರಾಗಳಲ್ಲಿ ಕಂಡಿದ್ದೇವೆ. ಪ.ಬಂಗಾಳದ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಜನತೆಯೊಂದಿಗೆ ನಿಕಟ ಸಂಪರ್ಕವನ್ನೂ ಸಾಧಿಸಲಾಯಿತು. ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ವಿಸ್ತರಿಸಲಾಯಿತು. ಗೇಣಿದಾರರ ಒಡೆತನದ ಹಕ್ಕನ್ನು ಕೊಡುವುದು, ಪರಿಣಾಮಕಾರಿ ಭೂಸುಧಾರಣಾ ಕಾನೂನಿನ ಜಾರಿ, ಕೆಲಸಕ್ಕಾಗಿ ಕಾಳು ಮುಂತಾದ ಪರಿಹಾರ ಕಾರ್ಯಗಳನ್ನು ವ್ಯಾಪಕವಾಗಿ ಕೈಗೊಳ್ಳಲಾಯಿತು. ಇದಕ್ಕೆ ವಿರುದ್ಧವಾಗಿ ಜನತಾ ಪಕ್ಷದ ರಾಜ್ಯ ಸರಕಾರಗಳು ಜನಗಳಿಂದ ಪ್ರತ್ಯೇಕವಾಗಿರುವುದರಿಂದ ಅಧಿಕಾರವನ್ನು ಇಂದಿರಾ ಕಾಂಗ್ರೆಸ್‌ಗೆ ಒಪ್ಪಿಸಬೇಕಾಯಿತು.

ಅನೇಕ ತೊಂದರೆಗಳನ್ನು ಎದುರಿಸಿ ಎಡರಂಗ ಸರಕಾರಗಳು ಸಮಾಜದ ಕೆಳಗಿನ ಸ್ತರಕ್ಕೆ ಸೇರಿದ ಜನಗಳಿಗಾಗಿ ಮಾಡುತ್ತಿರುವ ಕೆಲಸದಿಂದ ಜನಗಳು ಅವರನ್ನು ಮತ್ತೆ ಆರಿಸುವುದರಲ್ಲಿ ಆಶ್ಚರ್ಯವಿಲ್ಲ. ತ್ರಿಪುರಾದಂತಹ ಹಿಂದುಳಿದ ಗುಡ್ಡಗಾಡು ಜನರೇ ಹೆಚ್ಚಾಗಿರುವ ರಾಜ್ಯದಲ್ಲಿ ಭೂಮಿಯ ಪ್ರಶ್ನೆಯನ್ನು ಸಮರ್ಥ ರೀತಿಯಲ್ಲಿ ಬಗೆಹರಿಸಲಾಗಿದೆ. ಗುಡ್ಡಗಾಡು ಜನರಿಗೆ ಪ್ರತ್ಯೇಕ ಜಿಲ್ಲೆ, ಪಂಚಾಯಿತಿಗಳಿಗೆ ಅಧಿಕಾರ, ನಿರುದ್ಯೋಗದ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಸಿ. ಪಿ. ಐ. ಪಕ್ಷದ ಸೇರ್ಪಡೆಯಿಂದ ಮತ್ತಷ್ಟು ಬಲಿಷ್ಠವಾಗಿದೆ. ಈ ಮೈತ್ರಿಯನ್ನು ಬಲಗೊಳಿಸುವುದರ ಜೊತೆಯಲ್ಲಿ ಜನತೆಯ ವಿಶ್ವಾಸವನ್ನು ಮತ್ತಷ್ಟು ಗಟ್ಟಿಯಾಗಿ ಉಳಿಸಿಕೊಳ್ಳಬೇಕೆಂದು ಸಿ.ಪಿ.ಐ.(ಎಂ) ಕರೆ ನೀಡಿದೆ. ಈ ಐಕ್ಯತೆಯನ್ನು ಸಂಸತ್ತಿನ ಒಳಗೂ, ಹೊರಗೂ ಉಳಿಸಿಕೊಂಡು ಜನಸಾಮಾನ್ಯರ ಸಮಸ್ಯೆಗಳಿಗಾಗಿ ಹೋರಾಟ ಮಾಡಬೇಕೆಂದು ಸಿ.ಪಿ.ಐ.(ಎಂ) ಭಾವಿಸಿದೆ. ಇದೇ ಸಂದರ್ಭದಲ್ಲಿ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ಬಲಗೊಳಿಸಿ, ಐಕ್ಯ ಹೋರಾಟಗಳ ಮೂಲಕ ಜನತೆಯ ಹಿತರಕ್ಷಿಸಲು ಮುಂದಾಗಬೇಕೆಂದು ಪಕ್ಷದ ಪೊಲಿಟ್‌ಬ್ಯೂರೋ ತಿಳಿಸಿದೆ.

ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವ ಕೇಂದ್ರ-ರಾಜ್ಯಗಳ ಸಂಬಂಧದ ಪ್ರಶ್ನೆ ಹಾಗೆಯೇ ಉಳಿದಿದೆ. ತುರ್ತು ಪರಿಸ್ಥಿತಿಯಲ್ಲಿ ಹೆಚ್ಚಿನ ಅಧಿಕಾರವನ್ನು ಕೇಂದ್ರ ಸರಕಾರವೇ ಇಟ್ಟುಕೊಂಡಿತ್ತು. ರಾಜ್ಯ ಸರಕಾರ ಅಧಿಕಾರವನ್ನು ಕೇಂದ್ರ ಸರಕಾರ ಕಬಳಿಸದಂತೆ ನೋಡಿಕೊಳ್ಳಬೇಕಾಗಿದೆ. ವಿದೇಶಿ ಏಜೆಂಟರ ಕೈವಾಡದಿಂದ ಅಸ್ಸಾಂ ಮತ್ತು ಮೇಘಾಲಯಗಳಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ತಡೆಯುವುದರಲ್ಲಿ ಸಹಾ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ, ಜನತೆಯ ಹಿತರಕ್ಷಿಸಬೇಕೆಂದು ಸಿ.ಪಿ.ಐ.(ಎಂ) ಆಶಿಸುತ್ತದೆ.

(7ನೇ ಪುಟ ನೋಡಿ)

ಎಪ್ಪತ್ತರ ದಶಕದ ಆರ್ಥಿಕ ಬೆಳವಣಿಗೆಯ ಪಕ್ಷಿನೋಟ

ಇತ್ತೀಚೆಗೆ ನಡೆದ ಚುನಾವಣೆ ಪ್ರಚಾರಗಳಲ್ಲಿ ಪ್ರಮುಖ ಜಮೀನುದಾರಿ ಬಂಡವಾಳಶಾಹಿ ಪಕ್ಷಗಳಾದ ಜನತಾ ಮತ್ತು ಇಂದಿರಾ ಕಾಂಗ್ರೆಸ್, ತಮ್ಮ ತಮ್ಮ ಆಡಳಿತದ ಅವಧಿಯಲ್ಲಿನ ಸಾಧನೆಗಳನ್ನು ಮೇಲೆತ್ತಿ ವಿರೋಧಿಪಕ್ಷವನ್ನು ದೂಷಿಸಿ, ಈಗಿನ ಸಮಸ್ಯೆಗಳಿಗೆ ಇನ್ನೊಂದು ಪಕ್ಷವೇ ಕಾರಣ ಎಂದು ಹೇಳಿರುವುದು ಎಲ್ಲರೂ ಗಮನಿಸಿರುವ ವಿಷಯ. ಇಂದಿರಾಗಾಂಧಿ, ತನ್ನ ಅವಧಿಯಲ್ಲಿ ಸಾಧಿಸಿದ ಆರ್ಥಿಕ ಪ್ರಗತಿ, ಸುಭದ್ರತೆಗಳನ್ನು ಜನತಾ ತನ್ನ ಎರಡೇ ವರ್ಷದ ಆಡಳಿತದಲ್ಲಿ ಪೂರ್ತಿಯಾಗಿ ಹದಗೆಡಿಸಿತು ಎಂದು ಆಪಾದಿಸಿದರೆ, ಜನತಾಪಕ್ಷದವರು 30 ವರ್ಷಗಳ ಕಾಂಗ್ರೆಸ್ ದುರಾಡಳಿತದಿಂದಾದ ಸಮಸ್ಯೆಗಳನ್ನು 30 ತಿಂಗಳಲ್ಲಿ ಸರಿಪಡಿಸಲು ಸಾಧ್ಯವಾಗಲಿಲ್ಲ ಎಂದು ವಾದಿಸುತ್ತಿದ್ದರು. ಇವೆರಡು ವಾದಗಳ ಸತ್ಯಾಸತ್ಯತೆಯನ್ನು, ಅಂಕಿ ಸಂಖ್ಯೆಗಳ ಆಧಾರದಿಂದ ಈ ಲೇಖನದಲ್ಲಿ ಪರಿಶೀಲಿಸಲಾಗುವುದು. ದೇಶದಾದ್ಯಂತ ಇಂದಿರಾ ಕಾಂಗ್ರೆಸ್ 'ಸುಭದ್ರ ಸರ್ಕಾರ'ದ ಘೋಷಣೆಯ ಮೇಲೆ ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವ ಹಿನ್ನೆಲೆಯಲ್ಲಿ ಅದರ ಹಿಂದಿನ 'ಸುಭದ್ರತೆಯ' ಆಳ್ವಿಕೆ ಅವಧಿಯನ್ನು ವಿಶ್ಲೇಷಿಸುವುದು ಅಗತ್ಯ. ಪರಿಶೀಲನೆಗೆ ಇಂದಿರಾ ಆಡಳಿತದ ಕೊನೆಯ 7 ವರ್ಷಗಳು ಮತ್ತು ಜನತಾ ಆಡಳಿತದ ಎರಡುವರೆ ವರ್ಷಗಳ ಅವಧಿಯನ್ನು ಆರಿಸಿಕೊಳ್ಳಲಾಗಿದೆ. ಸಾಂದರ್ಭಿಕವಾಗಿ ಇದು ಕೆಲವು ದಿನಗಳ ಹಿಂದೆ ತಾನೆ ಮುಗಿದ 70ರ ದಶಕದಲ್ಲಿ ಭಾರತದ ಆರ್ಥಿಕ ರಂಗದ 'ಸಾಧನೆ'ಗಳ ಪಕ್ಷಿನೋಟ ಸಹ. 32 ವರ್ಷಗಳಷ್ಟು ಹಳೆಯದಾದ ಬಂಡವಾಳಶಾಹಿ-ಜಮೀನುದಾರ ವರ್ಗ ಆಡಳಿತದ 70ರ ದಶಕದ ಆರ್ಥಿಕ ರಂಗದ ನಿರ್ವಹಣೆಯ ಪ್ರಮುಖ ಲಕ್ಷಣಗಳನ್ನು ಸಹ ವಿಶ್ಲೇಷಿಸಲಾಗುವುದು.

ಈ ದಶಕದ ಆರ್ಥಿಕ ರಂಗದ ನಿರ್ವಹಣೆಯನ್ನು ಎರಡು ಭಾಗಗಳಲ್ಲಿ ಪರಿಶೀಲಿಸಲಾಗುವುದು. ಮೊದಲನೆಯದು ಆರ್ಥಿಕತೆಯ ಒಟ್ಟಾರೆ ಪರಿಸ್ಥಿತಿ; ಎರಡನೆಯದು ಆರ್ಥಿಕತೆಯ ಪ್ರಮುಖ ವಿಭಾಗಗಳಾದ ಕೈಗಾರಿಕೆ, ಕೃಷಿ ಇತ್ಯಾದಿ ರಂಗಗಳಲ್ಲಿನ ಬೆಳವಣಿಗೆಯ ಬಗ್ಗೆ ವಿವರಗಳು.

ಒಟ್ಟಾರೆ ಬೆಳವಣಿಗೆ :

ಒಟ್ಟಾರೆ ಆರ್ಥಿಕ ಬೆಳವಣಿಗೆಯ ಒಂದು ಪ್ರಮುಖ ಸೂಚಕ ಒಟ್ಟು ರಾಷ್ಟ್ರೀಯ ಉತ್ಪಾದನೆ (Net National Product) 70ರ ದಶಕದಲ್ಲಿ ಈ ಪ್ರತಿಯೊಂದು ವರ್ಷದಲ್ಲಿ ಒಟ್ಟು ಉತ್ಪಾದನೆ (NNP), ತಲಾ ಒಟ್ಟು ರಾಷ್ಟ್ರೀಯ ಉತ್ಪನ್ನ ಹಾಗೂ ಹಿಂದಿನ ವರ್ಷಕ್ಕಿಂತ ಇವೆರಡರಲ್ಲಿ ಆದ ಶೇಕಡಾ ಹೆಚ್ಚಳ ಇವುಗಳನ್ನು ಕೋಷ್ಟಕ-1ರಲ್ಲಿ ಕೊಡಲಾಗಿದೆ. ಈ ಮೊಬಲಗುಗಳು 1971ರ ಬೆಲೆಗಳನ್ನು ಆಧಾರವಾಗಿ ತೆಗೆದುಕೊಂಡವು.

ಕೋಷ್ಟಕ-1

ವರ್ಷ	ಹಿಂದಿನ ವರ್ಷಕ್ಕಿಂತ ಶೇಕಡಾ ಹೆಚ್ಚಳ: ಒಟ್ಟು ರಾಷ್ಟ್ರೀಯ ಉತ್ಪನ್ನ %	ಹಿಂದಿನ ವರ್ಷಕ್ಕಿಂತ ಶೇಕಡಾ ಹೆಚ್ಚಳ: ತಲಾ ಒಟ್ಟು ರಾಷ್ಟ್ರೀಯ ಉತ್ಪನ್ನ	ಒಟ್ಟು ರಾಷ್ಟ್ರೀಯ ಉತ್ಪನ್ನ (ಕೋಟಿ ರೂ.ಗಳಲ್ಲಿ)	ತಲಾ ಒಟ್ಟು ರಾಷ್ಟ್ರೀಯ ಉತ್ಪನ್ನ (ರೂ.ಗಳಲ್ಲಿ)
1950-51	—	—	16479	459
1970-71	—	—	34368	635
71-72	1.4	-0.9	34865	629
72-73	-1.5	-3.6	34334	607
73-74	5.2	2.9	36134	624
74-75	1.0	-1.0	36504	618
75-76	9,2	6.8	39849	660
76-77	1.4	0.6	40395	656
77-78	7.4	5.2	43395	690
78-79	3.5	3.2	44914	712

(ಈ ಲೇಖನದಲ್ಲಿರುವ ಅಂಕಿಸಂಖ್ಯೆಗಳು ಇಕನಾಮಿಕ್ ಸರ್ವೆ, 1979, ಭಾರತ ಸರ್ಕಾರದಿಂದ ತೆಗೆದುಕೊಳ್ಳಲ್ಪಟ್ಟಿದೆ)

ಈ ಕೋಷ್ಟಕದ ಅಂಕಿಸಂಖ್ಯೆಗಳ ಆಧಾರದ ಮೇಲೆ ಇಂದಿರಾ ಆಡಳಿತ ಮತ್ತು ಜನತಾ ಆಡಳಿತದಲ್ಲಿ ಒಟ್ಟಾರೆ ಆರ್ಥಿಕ ಬೆಳವಣಿಗೆಯನ್ನು ಹೋಲಿಸಬಹುದು.

* ಜನತಾ ಆಡಳಿತದ ಎರಡು ವರ್ಷಗಳ ಅವಧಿ ತಲಾ ಒಟ್ಟು ರಾಷ್ಟ್ರೀಯ ಉತ್ಪಾದನೆಯ ನಿರಂತರ ಹೆಚ್ಚಳದ ದರ (Compound Rate of Increase) ವರ್ಷಕ್ಕೆ ಶೇಕಡಾ 4.2. ಇಂದಿರಾ ಕಾಂಗ್ರೆಸ್ ಆಡಳಿತದ 6 ವರ್ಷದ ಅವಧಿಯಲ್ಲಿ ಈ ಹೆಚ್ಚಳ ದರ ಪ್ರತಿ ವರ್ಷಕ್ಕೆ ಕೇವಲ ಶೇಕಡಾ 0.6.

* ಇಂದಿರಾ ಆಡಳಿತದ ಅವಧಿಯಲ್ಲಿ 4 ವರ್ಷಗಳಲ್ಲಿ ನಿಜ ತಲಾ ಆದಾಯ ಅವುಗಳ ಹಿಂದಿನ ವರ್ಷಗಳಿಗಿಂತ ಕಡಿಮೆಯಾಯಿತು. ಜನತಾ ಆಡಳಿತದಲ್ಲಿ ತಲಾ ಆದಾಯ ಹಿಂದೆಂದಿಗಿಂತಲೂ ಗಮನಾರ್ಹವಾಗಿ ಏರಿತು.

* ಇಂದಿರಾ ಗಾಳಿಯ ಮೊದಲೆರಡು ವರ್ಷಗಳಲ್ಲೇ (1971-72 ಮತ್ತು 1972-73) ಒಂದೇ ಸಮನೆ ತಲಾ ಆದಾಯ ಗಮನಾರ್ಹವಾಗಿ ಇಳಿಯಿತು.

* ಈ ಲಕ್ಷಣಗಳನ್ನು 'ಕೃಷಿ ಹವಾಮಾನ ಚಕ್ರ' (ಅಂದರೆ ಕೃಷಿಯಲ್ಲಿ ಹವಾಮಾನದಿಂದಾಗುವ ಏರುಪೇರುಗಳು) ದಿಂದ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಈ 7 ವರ್ಷಗಳ ಇಂದಿರಾ ಆಡಳಿತದ ಅವಧಿಯಲ್ಲಿ ಕೃಷಿ ಉತ್ಪಾದನೆ ಹೆಚ್ಚಳದ ಅತ್ಯಂತ ಹೆಚ್ಚಿನ ದರ ಹೊಂದಿರುವ 1975-76 ವರ್ಷ ಸೇರಿದೆ.

* ಜನತಾ ಆಡಳಿತದ 2 ವರ್ಷಗಳಲ್ಲಿ ನಿಜ ಒಟ್ಟು ರಾಷ್ಟ್ರೀಯ ಉತ್ಪನ್ನ 4519 ಕೋಟಿ ರೂಗಳಷ್ಟು ಹೆಚ್ಚಾಯಿತು - ವರ್ಷಕ್ಕೆ ಸರಾಸರಿ 2259 ಕೋಟಿ ರೂಗಳು. ಇಂದಿರಾಕಾಂಗ್ರೆಸ್ ಆಡಳಿತದ 6 ವರ್ಷಗಳಲ್ಲಿ ಇದು 6027 ಕೋಟಿ ರೂಗಳಷ್ಟು ಹೆಚ್ಚಾಯಿತು. ಅಂದರೆ ವರ್ಷಕ್ಕೆ ಸರಾಸರಿ 1005 ಕೋಟಿ ರೂ. ಹೆಚ್ಚಳ.

* ಒಟ್ಟು ರಾಷ್ಟ್ರೀಯ ಉತ್ಪನ್ನದ ನಿರಂತರ ಹೆಚ್ಚಳ ದರ ಜನತಾ ಆಡಳಿತದಲ್ಲಿ ವರ್ಷಕ್ಕೆ ಶೇಕಡಾ 5 4 ಆದರೆ, ಇಂದಿರಾ ಆಡಳಿತದಲ್ಲಿ ಶೇಕಡಾ 2.8.

ಹೀಗೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಮುಖ್ಯ ವಿಷಯದಲ್ಲಿ ಜನತಾದ ಸಾಧನೆ ಕಾಂಗ್ರೆಸ್‌ಗಿಂತ ಉತ್ತಮ ತರವಾಗಿದೆ.

ಈ ಮೇಲಿನ ಅಂಕಿಸಂಖ್ಯೆಗಳನ್ನು ಸ್ವತಂತ್ರ ಭಾರತದಲ್ಲಿ ಬೂರ್ಜ್ವಾ-ಜಮೀನುದಾರ ಪಕಗಳ ಆಡಳಿತದ ಒಟ್ಟು ಅವಧಿಯ ಸಾಧನೆಗಳ ಹಿನ್ನೆಲೆಯಲ್ಲಿ ನೋಡಬೇಕು. 1950-51 ರಿಂದ 1978-78ರ 28 ವರ್ಷಗಳ ಅವಧಿಯಲ್ಲಿ ನಿಜ ಒಟ್ಟು ರಾಷ್ಟ್ರೀಯ ಉತ್ಪನ್ನದ ನಿರಂತರ ಹೆಚ್ಚಳದ ದರ 3.4 ಶೇಕಡಾ ಪ್ರತಿವರ್ಷ ಹಾಗೂ ತಲಾ ಒಟ್ಟು ರಾಷ್ಟ್ರೀಯ ಉತ್ಪನ್ನದ ಈ ದರ ಶೇಕಡಾ 1.6.

ನಿರುದ್ಯೋಗ ಮತ್ತು ತಲಾ ರಾಷ್ಟ್ರೀಯ ವರಮಾನದ ಹೆಚ್ಚಳ :

ಆದರೆ ಈ ತಲಾ ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಏನು ಅರ್ಥವಿದೆ ಎಂದು ನಿರುದ್ಯೋಗದ ಪ್ರಮಾಣ ಗಮನಿಸಿದರೆ ತಿಳಿಯುತ್ತದೆ. 1955ರಲ್ಲಿ 6.3 ಲಕ್ಷ ಜನ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಹೆಸರು ನೊಂದಾಯಿಸಿದ್ದು 1.7 ಲಕ್ಷ ಜನರಿಗೆ ಉದ್ಯೋಗ ದೊರಕಿದರೆ 1975ರಲ್ಲಿ 93.3 ಲಕ್ಷ ಜನರಲ್ಲಿ ಕೇವಲ 4.1 ಲಕ್ಷ ಜನರಿಗೆ ಉದ್ಯೋಗ ದೊರಕಿತು. 1978ರಲ್ಲಿ 123 ಲಕ್ಷ ಜನ ಉದ್ಯೋಗಾರ್ಥಿಗಳಲ್ಲಿ 5 ಲಕ್ಷ ಜನರಿಗಷ್ಟೇ ಉದ್ಯೋಗ ದೊರಕಿಸಲಾಯಿತು.

ಇದರ ಸಾರಾಂಶವಿಷ್ಟೇ 1950-1978ಕ್ಕೆ ನಿಜ ಒಟ್ಟು ರಾಷ್ಟ್ರೀಯ ವೇತನ 2.7 ಪಾಲು ಹೆಚ್ಚಿದರೆ ನಿರುದ್ಯೋಗಿಗಳು 37 ಪಾಲು ಹೆಚ್ಚಿದ್ದಾರೆ. ಇಷ್ಟರಿಂದಲೇ ಈ ತಲಾ ರಾಷ್ಟ್ರೀಯ ಆದಾಯ ಏರಿಕೆ ಯಾರ ಪಾಲಿಗೆ ಹೋಗುತ್ತಿದೆ ಎಂಬುದು ಸ್ಪಷ್ಟ. ಇಷ್ಟೇ ಅಲ್ಲದೆ ಈ ನಿರುದ್ಯೋಗಿಗಳ ಸಂಖ್ಯೆಗಳಲ್ಲಿ ಪಟ್ಟಣಗಳಲ್ಲಿರುವ ತಮ್ಮ ಹೆಸರು ನೊಂದಾಯಿಸದ ಹಾಗೂ ಗ್ರಾಮೀಣ ನಿರುದ್ಯೋಗಿ ಜನರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಗಮನಿಸಬೇಕು. ಇಷ್ಟರಿಂದಲೇ ಬೂರ್ಜ್ವಾ-ಜಮೀನುದಾರಿ ವರ್ಗಗಳ ಅಧಿಪತ್ಯದಲ್ಲಿರುವ ನಮ್ಮ ರಾಜಕೀಯ ಆರ್ಥಿಕ ವ್ಯವಸ್ಥೆ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪೂರ್ಣ ವಿಫಲಗೊಂಡಿದೆ ಎಂದು ತಿಳಿಯಬಹುದು. ಒಟ್ಟು ಉತ್ಪನ್ನದ ಸ್ವಲ್ಪ ಹೆಚ್ಚಳವಿದ್ದರೂ, ನಿರುದ್ಯೋಗ ಅಪಾಯಕಾರಿಯಾಗಿ ಬೆಳೆಯುತ್ತಿರುವುದು ಈ ಥರದ ವ್ಯವಸ್ಥೆಯ ನೇರ ಫಲ. ಆದರೆ ಈ ವ್ಯವಸ್ಥೆಗೆ ತನ್ನ ಬಗ್ಗೆ ಹೇಳಿಕೊಳ್ಳಲು ಇರುವುದು ಒಂದೇ ಒಂದು ಆರ್ಥಿಕ ವಸ್ತು ಸ್ಥಿತಿ 28 ವರ್ಷಗಳಲ್ಲಿ 1.6 ಶೇಕಡಾ ನಿರಂತರ ತಲಾ ವರಮಾನದ ಹೆಚ್ಚಳ ದರವನ್ನು ಕಾಪಾಡಿಕೊಂಡು ಬಂದಿದೆ. ಇದರರ್ಥ ಇನ್ನೂ ಈ ವ್ಯವಸ್ಥೆ ಜನಸಂಖ್ಯಾ ಹೆಚ್ಚಳದ ದರಕ್ಕಿಂತ 1.6 ಶೇಕಡಾ ಹೆಚ್ಚಿಗೆ ಒಟ್ಟು ವರಮಾನ ಏರಿಕೆ ಪಡೆಯಲು ಶಕ್ತವಾಗಿದೆ. ಇದೇ ಈ ವ್ಯವಸ್ಥೆ ಇನ್ನೂ ಪೂರ್ತಿಯಾಗಿ ಕುಸಿದು ಬೀಳದಿರುವುದಕ್ಕೆ ಈ ವಸ್ತುಸ್ಥಿತಿ ಒಂದು ಕಾರಣ. ಇಂದಿರಾ ಗಾಂಧಿಯ ಆಡಳಿತದ 4 ವರ್ಷಗಳಲ್ಲಿ ಮಾತ್ರ ಈ ತಲಾ ವರಮಾನ ಇಳಿಮುಖವಾಗಿತ್ತು. ಇಂದಿರಾ ಆಡಳಿತದ ಕೊನೆಯ 6-7 ವರ್ಷಗಳ ಸರಾಸರಿ ಶೇಕಡಾ ಹೆಚ್ಚಳ ಸಹ ಬೇರೆ ಅವಧಿಗಳಿಗೆ ಹೋಲಿಸಿ ನೋಡಿದಾಗ ಕಡಿಮೆಯಿತ್ತು. ಜನತಾ ಆಡಳಿತದೊಂದಿಗೆ ಇಂದಿರಾ ಪೂರ್ವ ಅವಧಿಯಂತೆ ಸ್ವಲ್ಪವಾದರೂ ನಿಚ್ಚಳ ತಲಾ ಆದಾಯದ ಹೆಚ್ಚಳ ಪುನಃ ಸ್ಥಾಪಿತವಾಯಿತು. ಆದರೆ ಈ ಹೆಚ್ಚಳ ಹೀಗೆ ಮುಂದುವರೆಯಲು ಹಲವು ಅಡೆತಡೆಗಳಿವೆ. ತೀವ್ರ ಬೆಲೆ ಏರಿಕೆಯಿಲ್ಲದೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಸ್ವಲ್ಪವಾದರೂ ತಲಾ ಆದಾಯದ ಹೆಚ್ಚಳ ಮುಂದುವರಿಸಿಕೊಂಡು ಹೋಗುವುದು ಆಳುವ ವರ್ಗಗಳಿಗೆ ಕಷ್ಟಸಾಧ್ಯವಾದ ಕೆಲಸ.

ಸ್ಥಗಿತತೆಯ (Stagnation) ಜತೆಗೆ ಹಣದುಬ್ಬರ ಇರುವ ಪ್ರಸಕ್ತ ಅವಧಿಯಲ್ಲಿ ಬೆಲೆ ಏರಿಕೆ ಬಂಡವಾಳಶಾಹಿ ಪರ ಸರಕಾರಗಳ ಆಯುಧ, ಇಂದಿರಾ ಕಾಂಗ್ರೆಸ್ ಮತ್ತು ಜನತಾ ಸರ್ಕಾರಗಳು ಇದಕ್ಕೆ ಅಪವಾದವಲ್ಲ. ಆದ್ದರಿಂದ ಕಳೆದ ದಶಕದಲ್ಲಿ ಬೆಲೆ ಏರಿಕೆಯ ಸ್ವರೂಪವನ್ನು ಪರಿಶೀಲಿಸುವುದು ಅಗತ್ಯ. ಕೋಷ್ಟಕ-2 ರಲ್ಲಿ ಕಳೆದ ದಶಕದ ಸಗಟು ಬೆಲೆ ಸೂಚ್ಯಂಕ (Wholesale Price Index) ಮತ್ತು ಬಳಕೆದಾರರ ಬೆಲೆ ಸೂಚ್ಯಂಕ (Consumer Price Index) ಗಳನ್ನು ಕೊಡಲಾಗಿದೆ.

ಕೋಷ್ಟಕದಿಂದ ಬೆಲೆಗಳು ಒಂದೇ ಸಮನೆ ಏರುತ್ತಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಬೆಲೆ ಏರಿಕೆಯ ದೃಷ್ಟಿಯಿಂದ ಇಂದಿರಾ ಮತ್ತು ಜನತಾ ಸರಕಾರದ ಅವಧಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಜನತಾ ಆಡಳಿತದಲ್ಲಿ 1978ರ ಕೊನೆಯವರೆಗೆ ಬೆಲೆಗಳು ಸ್ವಲ್ಪ ಸ್ಥಿಮಿತದಲ್ಲಿದ್ದರೂ ಸಹ ಫೆಬ್ರವರಿ 1979ರ ನಂತರ ಬೆಲೆಗಳು ವಿಪರೀತವಾಗಿ ಏರಲಾರಂಭಿಸಿದವು. ಜುಲೈ 1978ರಿಂದ ಜುಲೈ 1979 ಕ್ಕೆ ಬೆಲೆಗಳು ಸುಮಾರು ಶೇಕಡಾ 13 ರಷ್ಟು ಏರಿರುವುದನ್ನು ಕಾಣಬಹುದು.

ಇದು ಹಣಕಾಸಿನ ಮಂತ್ರಿಯ ಅಥವಾ ದೊಡ್ಡ ಕಂಪೆನಿಗಳ ಉತ್ಪನ್ನಗಳ ಬೆಲೆ ನಿರ್ಧರಿಸುವ ಅಧಿಕಾರಿಗಳ ಹುಚ್ಚು ಆಲೋಚನಾ ಕ್ರಮದ ಫಲಗಳು ಎಂದು ತಿಳಿಯಬೇಕಾಗಿಲ್ಲ. ಇದು ಭಾರತದ ಗುತ್ತೇದಾರಿ ಬಂಡವಾಳಶಾಹಿಯ ಬೆಳವಣಿಗೆಯ ಈಗಿನ ಹಂತದಲ್ಲಿ ತಪ್ಪಿಸಿಕೊಳ್ಳಲಾಗದ ಪರಿಸ್ಥಿತಿ.

ಆರ್ಥಿಕತೆಯ ಹಿಂಜರಿತ (recersion) ಕಡೆಗೆ ಹೋಗುವುದನ್ನು ತಪ್ಪಿಸಲು ಜಗತ್ತಿನಾದ್ಯಂತ ಎಲ್ಲಾ ಬಂಡವಾಳಶಾಹಿ ಪ್ರಭುತ್ವಗಳು ಹಣದ ಬೇಡಿಕೆ ಹೆಚ್ಚಿಸಲು ಪ್ರಯತ್ನಿಸುತ್ತವೆ. ಅಂದರೆ, ಆಗಲೇ ತಯಾರಾಗಿರುವ ಉತ್ಪನ್ನಗಳು ಹೆಚ್ಚಿನ ಬೆಲೆಗಳಲ್ಲಿ ಮಾರಾಟವಾಗುವಂತೆ ಪ್ರಯತ್ನಿಸುತ್ತವೆ ಇದು ಸಾರ್ವತ್ರಿಕ ಬೆಲೆಏರಿಕೆಯಲ್ಲಿ ಪರಿಣಮಿಸುತ್ತದೆ. ಹಣಕ್ಕೆ ಹೆಚ್ಚಿನ ಬೇಡಿಕೆಯನ್ನು ಉಂಟುಮಾಡಲು, ಹೆಚ್ಚಿನ ಬಂಡವಾಳ ಹೂಡಿ ಹೆಚ್ಚು ಉತ್ಪನ್ನಗಳನ್ನು ತಯಾರಿಸಿ ಬೆಲೆ ಸ್ಥಿಮಿತದಲ್ಲಿಡದಿರುವುದರಿಂದ, ಉತ್ಪನ್ನಗಳಲ್ಲಿ ಹೆಚ್ಚುವರಿ ಆಗದೆ ಬರಿಯ ಬೆಲೆಗಳು ಏರುತ್ತಾ ಹೋಗುತ್ತವೆ. ಇದು ಹಣದುಬ್ಬರ (inflation) ನಡುವೆ ಸ್ಥಗಿತತೆಗೆ (stagnation)ಆಸ್ಪದ ಕೊಡುತ್ತದೆ. ಈ ಪರಿಸ್ಥಿತಿಯಲ್ಲಿ ದೀರ್ಘಾವಧಿಯವರೆಗೆ ಬೆಲೆ ಸ್ಥಿಮಿತದಲ್ಲಿಡುವ ಪ್ರಯತ್ನ ಹಿಂಜರಿತಕ್ಕೆ ಎಡೆ ಮಾಡಿಕೊಡುತ್ತದೆ. ಈ ವಿಷಚಕ್ರ ಬಂಡವಾಳಶಾಹಿ ಪದ್ಧತಿಯ ಮುಖ್ಯ ಲಕ್ಷಣ. ಆ ಪದ್ಧತಿ ಇರುವವರೆಗೆಪರಿಹರಿಸಲಾಗದ್ದು ಜನತಾ ಸರಕಾರದ 1979ರ ಬಜೆಟ್‌ನಲ್ಲಿ

ಕೋಷ್ಟಕ-2

ಸಗಟು ಬೆಲೆ ಸೂಚ್ಯಂಕ ಮತ್ತು ಬಳಕೆದಾರರ ಬೆಲೆ ಸೂಚ್ಯಂಕ

ವರ್ಷ	ಬಳಕೆದಾರ ಬೆಲೆ ಸೂಚ್ಯಂಕ (1960ರ ಸೂಚ್ಯಂಕ 100 ಎಂದಿಟ್ಟುಕೊಂಡು)	ಸಗಟು ಬೆಲೆ ಸೂಚ್ಯಂಕ (1970ರ ಸೂಚ್ಯಂಕ (100 ಎಂದಿಟ್ಟುಕೊಂಡು)
1960	100	—
1970-71	186	100
1971-72	192	105.6
1972-73	207	116.2
1973-74	250	139.7
1974-75	317	174.9
1975-76	313	173.0
1976-77	301	176.0
1977-78	324	185.8
1978-79	332	185.5
ಜುಲೈ 78		186.6
ಜುಲೈ 79		211.00

ಹೇರಿದ ಅಪ್ರತ್ಯಕ್ಷ ತೆರಿಗೆಗಳು ಹಾಗೂ ಇತರ ಹಲವು ಕ್ರಮಗಳು ಹಣದುಬ್ಬರಕ್ಕೆ ಉತ್ತೇಜನ ಕೊಡುವಂತವುಗಳಾಗಿದ್ದವು.

ಇದು ಒಟ್ಟಾರೆ ಅರ್ಥಿಕತೆಯ ಪರಿಸ್ಥಿತಿಯಾದರೆ ಇನ್ನು ಆರ್ಥಿಕತೆಯ ಮುಖ್ಯ ಭಾಗಗಳನ್ನು ವಿವರವಾಗಿ ಪರಿಶೀಲಿಸಬಹುದು.

ಕೈಗಾರಿಕಾರಂಗ :

ಕೈಗಾರಿಕಾರಂಗ ಅರ್ಥಿಕತೆಯ ಮುಖ್ಯ ವಿಭಾಗ. ಕೈಗಾರಿಕಾ ಉತ್ಪಾದನೆಯ ಹೆಚ್ಚಳ ಕೋಷ್ಟಕ 3ರಲ್ಲಿ ಕೊಡಲಾಗಿದೆ.

ಕೋಷ್ಟಕ 3

ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ (ಹಿಂದಿನ ವರ್ಷದ ಮೇಲೆ ಶೇಕಡಾ ಹೆಚ್ಚಳ)

1971	4.2%
1972	5.8%
1973	1.6%
1974	2.1%
1975	4 7%
1976	9.8%
1977	5.3%
1978 (ಜನವರಿ-ಅಕ್ಟೋಬರ್)	6.2%
1978-79	7.6%
1978 (ಜನವರಿ-ಅಕ್ಟೋಬರ್ 1970ರ ಮೇಲೆ	5.0%

ಈ ಕೋಷ್ಟಕದ ಅಂಕೆಸಂಖ್ಯೆಗಳ ಹಿನ್ನೆಲೆಯಲ್ಲಿ ಕೈಗಾರಿಕಾ ಉತ್ಪಾದನೆಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ಇಂದಿರಾ ಆಡಳಿತಕ್ಕೂ ಜನತಾ ಆಡಳಿತಕ್ಕೂ ಹೆಚ್ಚಿನ ವ್ಯತ್ಯಾಸಗಳಿಲ್ಲ. ಆದರೆ ಇಂದಿರಾ ಆಡಳಿತದ 1973 ಮತ್ತು 1974 ಇವೆರಡು ವರ್ಷಗಳು ಕೈಗಾರಿಕಾ ಉತ್ಪಾದನೆಯ ಅತ್ಯಂತ ಕಡಿಮೆ ಹೆಚ್ಚಳವಿದ್ದ ವರ್ಷಗಳು. ಇಡೀ ದಶಕದ ಕೈಗಾರಿಕಾ ಉತ್ಪಾದನೆಯ ಹೆಚ್ಚಳದ ದರ ಶೇಕಡಾ 5 ಪ್ರತಿ ವರ್ಷಕ್ಕೆ.

ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳ ಹೆಚ್ಚಳದ ನಿರಂತರ ಶೇಕಡಾ ದರ (71 ರಿಂದ 78ರವರೆಗೆ) ಕೇವಲ ಶೇಕಡಾ 3.0. ಇದು 60ರ ದಶಕದಲ್ಲಿದ್ದ (ಶೇಕಡಾ 3 75) ಕ್ಕಿಂತಲೂ ಕಡಿಮೆ ಎಂದು ಗಮನಿಸಬೇಕು. ಈ ದರ (70ರ ದಶಕದ) ಕೈಗಾರಿಕಾ ಉತ್ಪನ್ನಗಳ ಹೆಚ್ಚಳದ ದರ (ಶೇಕಡಾ 5)ಕ್ಕಿಂತಲೂ ಕಡಿಮೆ ಇದೆ. ಇದರಿಂದ ಕೈಗಾರಿಕಾ ಉತ್ಪನ್ನಗಳು ಏರಿದ ಪ್ರಮಾಣದಲ್ಲೇ ಉದ್ಯೋಗಾವಕಾಶಗಳು ಏರಿಲ್ಲ ಎಂಬುದು ಸ್ಪಷ್ಟ. ಈ ಎರಡು ದರಗಳ ಅಂತರದಿಂದಾಗಿ ಮತ್ತು ಮೊದಲು ಸಹ ಉದ್ಯೋಗಕ್ಕೆ ಅರ್ಹರಾದ ಜನರ ಒಂದು ಸಣ್ಣ ಭಾಗಮಾತ್ರ ಉದ್ಯೋಗ ಪಡೆದಿದ್ದರಿಂದ, ನಿರುದ್ಯೋಗವನ್ನು ಹೋಗಲಾಡಿಸುವ ಬದಲು ಕೈಗಾರಿಕಾ ಉತ್ಪಾದನೆಯ ಹೆಚ್ಚಳ ಇನ್ನೂ ಭೀಕರವಾಗಿಸುತ್ತಿದೆ.

ಭಾರತದ ಕೈಗಾರಿಕಾ ಕ್ಷೇತ್ರದ ಇನ್ನೊಂದು ಲಕ್ಷಣ 'ರೋಗಗ್ರಸ್ತ' ಕೈಗಾರಿಕೆಗಳು(Sick industries) ಇದು ರೋಗಗ್ರಸ್ತ ಆರ್ಥಿಕತೆಯ ಲಕ್ಷಣ ಸಹ. 1977ರ ಕೊನೆ ಹೊತ್ತಿಗೆ ಸುಮಾರು 289 ದೊಡ್ಡ ಹಾಗೂ ಮಧ್ಯಮ ಕೈಗಾರಿಕೆಗಳು 8000 ಸಣ್ಣ ಪ್ರಮಾಣದ ಕೈಗಾರಿಕೆಗಳು ರೋಗಗ್ರಸ್ತವಾಗಿದ್ದವು. 1977ರ ಕೊನೆಯ ಹೊತ್ತಿಗೆ ಸುಮಾರು 1059 ಕೋಟಿ ರೂ ಬ್ಯಾಂಕ್ ಸಾಲ ಈ ರೋಗಗ್ರಸ್ತ ಕೈಗಾರಿಕೆಗಳಲ್ಲಿ ಕೊಳೆಯುತ್ತಿತ್ತು. 1977 ರಲ್ಲೇ 48 ಕೈಗಾರಿಕಾ ಘಟಕಗಳು ರೋಗಗ್ರಸ್ತವಾದವು.

ಇಂದಿರಾ ಆಡಳಿತದ ಅವಧಿಯಲ್ಲಿ ಪ್ರತಿವರ್ಷಕ್ಕೆ ಸರಾಸರಿ ಶೇಕಡಾ ಹೆಚ್ಚಳ 2.24. ಇಷ್ಟೇ ಅಲ್ಲದೆ ಈ ಅವಧಿಯ 4 ವರ್ಷಗಳಲ್ಲಿ ಒಟ್ಟು ಕೃಷಿ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಗಮನಾರ್ಹವಾಗಿ ಇಳಿಯಿತು. ಜನತಾ ಆಡಳಿತದ ಮೊದಲ

ಕೃಷಿ ಉತ್ಪಾದನೆ :

ಆರ್ಥಿಕತೆಯ ಇನ್ನೊಂದು ಮುಖ್ಯ ಘಟಕವಾದ ಕೃಷಿ ಉತ್ಪಾದನೆಯ ಹೆಚ್ಚಳವನ್ನು ಕೋಷ್ಟಕ 4ರಲ್ಲಿ ಕಾಣಬಹುದು.

ಕೋಷ್ಟಕ 4

ಕೃಷಿ ಉತ್ಪಾದನೆಯ ಬೆಳವಣಿಗೆ

(1969-70ರಲ್ಲಿ ಮುಗಿದ 3 ವರ್ಷಗಳ ಸರಾಸರಿ ಉತ್ಪಾದನೆ 100 ಎಂದಿಟ್ಟುಕೊಂಡು)

ಅವಧಿ	ಸೂಚ್ಯಂಕ	ಹಿಂದಿನ ವರ್ಷಕ್ಕಿಂತ ಶೇಕಡಾ ಹೆಚ್ಚಳ	1969-70ಕ್ಕಿಂತ ಶೇಕಡಾ ಹೆಚ್ಚಳ (ಪ್ರತಿವರ್ಷಕ್ಕೆ)
1969-70	100	—	
1970-71	111.5	+ 11.5	
1971-72	111.2	— 0.27	
1972-73	102.3	— 8.0	
1973-74	112.4	+ 9.9	
1974-75	108.8	— 3.2	
1975-76	125.3	+15.2	
1976-77	116 5	— 7.0	+ 2.24
1977-78	132.7	+ 13.9	+ 3.6

ವರ್ಷದಲ್ಲಿ ಅತ್ಯಂತ ಹೆಚ್ಚಿನ ಒಟ್ಟು ಕೃಷಿ ಉತ್ಪಾದನೆಯ ವಿಕ್ರಮ ಸ್ಥಾಪಿಸಿತು. ಇದು ಇಂದಿರಾ ಆಡಳಿತದ ಅವಧಿಯ ಗರಿಷ್ಟ ಉತ್ಪಾದನೆಗಿಂತಲೂ ಶೇಕಡಾ 5.9 ರಷ್ಟು ಹೆಚ್ಚಿತ್ತು. 1978-79ರ ಸೂಚ್ಯಂಕ ಇನ್ನೂ ದೊರಕಿಲ್ಲದಿದ್ದರೂ ಅಂದಾಜುಗಳ ಪ್ರಕಾರ ಜನತಾ ಆಡಳಿತದ ಅವಧಿಯ ಸರಾಸರಿ ವರ್ಷಂಪ್ರತಿ ಶೇಕಡಾ ಹೆಚ್ಚಳ. ಇಂದಿರಾ ಆಡಳಿತದ್ದಕ್ಕಿಂತ ಗಮನಾರ್ಹವಾಗಿ ಹೆಚ್ಚಿತ್ತು.

ಇಡಿಯ ದಶಕದ ಕೃಷಿ ಉತ್ಪಾದನೆಯ ಹೆಚ್ಚಳದ ವರ್ಷಂಪ್ರತಿ ಸರಾಸರಿ ಶೇಕಡಾ ಹೆಚ್ಚಳ 3.6. ಆದರೆ ಕೈಗಾರಿಕೆಯದು ಶೇಕಡಾ 5.0.

ವಿದೇಶಿ ವಿನಿಮಯ, ವಾಣಿಜ್ಯ ವಿಷಮತೆ ಮತ್ತು ಸಾಲ :

ಭಾರತದ ಗುತ್ತೇದಾರಿ ಬಂಡವಾಳಶಾಹಿ-ಜಮೀನುದಾರಿ ಆಧಿಪತ್ಯದ ಪೂರ್ಣ ದಿವಾಳಿತನಕ್ಕೆ ಒಳ್ಳೆಯ ಉದಾಹರಣೆ ಭಾರತದ ಕಾದಿಟ್ಟ ವಿದೇಶಿ ವಿನಿಮಯ (Foreign exchange reserves), ವಿದೇಶಿ ವಾಣಿಜ್ಯ ವಿಷಮತೆ, ಮತ್ತು ವಿದೇಶಿ ನೆರವಿನ ತುಲನಾತ್ಮಕ ಅಧ್ಯಯನದಲ್ಲಿ ಸಿಗುತ್ತದೆ. ಕೋಷ್ಟಕ -5 ರಲ್ಲಿ ಪ್ರತಿ ವರ್ಷದ ಈ ಮೊತ್ತಗಳನ್ನು ಕೊಡಲಾಗಿದೆ. ವಿದೇಶಿ ವಾಣಿಜ್ಯ ವಿಷಮತೆ ಎಂದರೆ ದೇಶದ ಆಮದಾದ ವಸ್ತುಗಳ ಹಾಗೂ, ರಫ್ತು ಮಾಡಲ್ಪಟ್ಟ ವಸ್ತುಗಳ ಹಣಮೌಲ್ಯಗಳಲ್ಲಿರುವ ವ್ಯತ್ಯಾಸ. (ಕೋಷ್ಟಕದಲ್ಲಿ ವಿಷಮತೆ ಶೀರ್ಷಿಕೆಯಡಿಯಲ್ಲಿ ಕೊಟ್ಟಿರುವುದು. ರಫ್ತು — ಆಮದು, ಆದ್ದರಿಂದ ಆಮದು ಹೆಚ್ಚಿದ್ದಾಗ — ಚಿಹ್ನೆ ಮತ್ತು ರಫ್ತು ಹೆಚ್ಚಿದ್ದಾಗ + ಚಿಹ್ನೆ ಉಪಯೋಗಿಸಲಾಗಿದೆ)

ಕೋಷ್ಟಕದಲ್ಲಿ ಕಂಡುಬರುವಂತೆ ಕಾದಿಟ್ಟ ವಿದೇಶಿ ವಿನಿಮಯ ಹಿಂದೆಂದೂ ಇಲ್ಲದ ದರದಲ್ಲಿ ಏರುತ್ತಿದೆ. 1974-79ರ 5 ವರ್ಷದ ಅವಧಿಯಲ್ಲಿ ಸುಮಾರು 8 ಪಾಲಾಗಿದೆ. ಅದೇ ಸಮಯದಲ್ಲಿ ವಿದೇಶಿ ವಾಣಿಜ್ಯ ವಿಷಮತೆ ಹಾಗೆ ಇರುವುದು ಕಾಣಬಹುದು. 5 ವರ್ಷದ ಅವಧಿಯಲ್ಲಿ ಒಂದು ವರ್ಷ ಬಿಟ್ಟರೆ ಎಲ್ಲಾ ವರ್ಷಗಳಲ್ಲಿ ಆಮದು ರಫ್ತಿಗಿಂತ ಬಹಳಷ್ಟು ಹೆಚ್ಚಿಗಿದೆ. ಈ ವಾಣಿಜ್ಯ ವಿಷಮತೆ ಇದ್ದರೂ ಕಾದಿಟ್ಟ ವಿದೇಶಿ ವಿನಿಮಯ ಹೆಚ್ಚುತ್ತಿರುವುದು ಪ್ರಯಾಣ, ಸಾರಿಗೆ, ದೇಶದೊಳಕ್ಕೆ ಬರುತ್ತಿರುವ ಖಾಸಗಿ ಹಣ, ವಿದೇಶದಲ್ಲಿರುವ ಭಾರತೀಯ ಕಾರ್ಖಾನೆಗಳ ಲಾಭ ಮುಂತಾದವುಗಳಿಂದ. ಆದರೆ ಈ ಕಾದಿಟ್ಟ ವಿದೇಶಿ ವಿನಿಮಯ ಹಣವನ್ನು ಹೊಸ ಕೈಗಾರಿಕೆ ಸ್ಥಾಪಿಸಲು ಬೇಕಾದ ಯಂತ್ರೋಪಕರಣಗಳಿಗೆ, ಕಚ್ಚಾ ಸಾಮಾನುಗಳಿಗೆ ಉಪಯೋಗಿಸಿ ದೇಶದ ಆರ್ಥಿಕ ಪ್ರಗತಿಯನ್ನು ತೀವ್ರವಾಗಿಸುವ ಸಾಧ್ಯತೆಯನ್ನು ಕಾರ್ಯಗತಗೊಳಿಸಲಾಗದಷ್ಟು ಭಾರತದ ಆರ್ಥಿಕತೆ ನಿರ್ವೀರ್ಯಗೊಂಡಿದೆ. ಬದಲಾಗಿ ಇದನ್ನು ಬೇರೆ ದೇಶಗಳು ಉಪಯೋಗಿಸುವಂತೆ ಆಗಿದೆ.

ಇನ್ನೊಂದು ವೈರುಧ್ಯ ಎಂದರೆ ಅದೇ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ವಿದೇಶಿ ನೆರವು ಸಾಲದ ರೂಪದಲ್ಲಿ ಬರುತ್ತಿದೆ. (ಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಾಗಿದ್ದರೂ.) ತುರ್ತುಪರಿಸ್ಥಿತಿಯ ಮೊದಲ ವರ್ಷದಲ್ಲಿ ವಿದೇಶಿ ನೆರವು ಅತ್ಯಧಿಕ ಪ್ರಮಾಣದ್ದಾಗಿತ್ತು ಎಂದು ಸಹ ಗಮನಿಸಬಹುದು ಈ ಅತ್ಯಧಿಕ ಪ್ರಮಾಣದ ನೆರವು (ಸಾಲ) ನಿಂದ, ಮುಂದಿನ ವರ್ಷಗಳಲ್ಲಿ ಇದರ ಅಸಲು ಹಾಗೂ ಬಡ್ಡಿಯನ್ನು ತೀರಿಸುವಲ್ಲಿ ದೇಶದ ಸಂಪನ್ಮೂಲಗಳ ದೊಡ್ಡ ಅಂಶ ವ್ಯರ್ಥವಾಗುತ್ತದೆ ಎಂದು ಬೇರೆ ಹೇಳಬೇಕಿಲ್ಲ. ಈ ರೀತಿ ನಷ್ಟವಾಗುವ ಸಂಪನ್ಮೂಲದ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಳವಳಕಾರಿಯಾಗಿ ಏರುತ್ತಿದೆ. ಸಾಲದ ಮತ್ತು ಅದರ ಬಡ್ಡಿಯ ಮರುಪಾವತಿಯ ಮೊತ್ತ 1977-78 ರಲ್ಲಿ 821 ಕೋಟಿ ರೂ.ಗಳು. ಇದು ಒಟ್ಟು ವಿದೇಶಿ ನೆರವಿನ ಶೇಕಡಾ 64 ರಷ್ಟು ಎಂದಾಗ ಸಮಸ್ಯೆಯ ಭೀಕರತೆ ಮನದಟ್ಟಾಗುತ್ತದೆ.

ಕೋಷ್ಟಕ-5

ವರ್ಷ	ಕಾದಿಟ್ಟ ವಿದೇಶಿ ವಿನಿಮಯ (ಕೋಟಿ ರೂ.ಗಳಲ್ಲಿ)	ವಿದೇಶಿ ವಾಣಿಜ್ಯ ವಿಷಮತೆ (ಕೋಟಿರೂ.ಗಳಲ್ಲಿ)	ವಿದೇಶಿ ನೆರವು (ಕೋಟಿರೂ ಗಳಲ್ಲಿ)
1974-75	610.5	— 1190.0	688
1975-76	1491.7	— 1222.4	1154
1976-77	2863.0	+ 68.0	844
1977-78	4499.8	— 652.4	467
1978-79	5081.7		544

ಈಗ, ಕಾದಿಟ್ಟ ವಿದೇಶಿ ವಿನಿಮಯ ಬೇಕಷ್ಟು ಉಪಯೋಗಿಸದೆ ಬಿದ್ದಿರುವಾಗ, ಈ ಅಗಾಧ ವಿದೇಶಿ ನೆರವು ಮತ್ತು ವಾಣಿಜ್ಯ ವಿಷಮತೆ ಈ ಪ್ರಮಾಣದಲ್ಲಿ ಏಕೆ ಮುಂದುವರಿಯುತ್ತಿದೆ ಎಂಬ ಪ್ರಶ್ನೆ ಏಳುತ್ತದೆ. ಈ ಕಾದಿಟ್ಟ ಹಣವನ್ನು ಹೊಸ ಕೈಗಾರಿಕೆಗಳಲ್ಲಿ ಬಂಡವಾಳವಾಗಿ ಏಕೆ ಹೂಡಲಾಗುತ್ತಿಲ್ಲ? ಇದರ ಕಾರಣವಿಷ್ಟೆ ದೇಶದಲ್ಲಿ ಉತ್ಪಾದಿಸಿದ ಸಿದ್ಧ ವಸ್ತುಗಳಿಗೆ ಪರಿಣಾಮಕಾರಿಯಾದ ಬೇಡಿಕೆಯ ಕೊರತೆ. ಇದು ಗುತ್ತೇದಾರಿ ಬಂಡವಾಳಶಾಹಿಯ ಇನ್ನೊಂದು ವಿಪರ್ಯಾಸ. ಸಿದ್ಧವಸ್ತುಗಳ ಅವಶ್ಯಕತೆ ಇದೆ, ಆ ವಸ್ತುಗಳನ್ನು ತಯಾರಿಸಲು ಬೇಕಾದ ಬಂಡವಾಳಸಹ ಇದೆ. ಆದರೆ ಈ ಸಿದ್ಧ ವಸ್ತುಗಳನ್ನು ತಯಾರಿಸಿದರೆ ದೇಶದ ಜನರಲ್ಲಿ ಇವನ್ನು ಕೊಳ್ಳುವ ಶಕ್ತಿಯಿಲ್ಲ. (ಇದನ್ನೇ ಪರಿಣಾಮಕಾರಿಯಾದ ಬೇಡಿಕೆ ಇಲ್ಲ ಎನ್ನಲಾಗಿದೆ). ದೇಶದ ಬಹುಸಂಖ್ಯಾತ ಜನರಲ್ಲಿ ಕೊಳ್ಳುವ ಶಕ್ತಿಯಿಲ್ಲದಿರುವುದಕ್ಕೆ ಅವರ ಕೂಲಿ, ಆದಾಯ ಸಾಕಷ್ಟು ಇಲ್ಲದಿರುವುದು ಮತ್ತು ಇದಕ್ಕೆ ನೇರ ಕಾರಣ ವರ್ಗ ವ್ಯವಸ್ಥೆ ಎಂಬುದು ಸ್ಪಷ್ಟ. ಆದರೆ ದೇಶದ ಬಹುಸಂಖ್ಯಾತ ಜನರ ಕೊಳ್ಳುವ ಶಕ್ತಿ ಏರಿಸುವ ಪ್ರಯತ್ನ ಮಾಡದೆ, ಪರಿಣಾಮಕಾರಿ ಬೇಡಿಕೆಯನ್ನು ಆರ್ಥಿಕತೆಯಲ್ಲಿ ಹಣದ ಪೂರೈಕೆ ಹೆಚ್ಚಳಕೆಯಿಂದ ಕೃತಕವಾಗಿ

ಸಾಧಿಸಲು ಗುತ್ತೇದಾರಿ-ಬಂಡವಾಳಶಾಹಿಪರ ಸರಕಾರಗಳು ಪ್ರಯತ್ನಿಸುತ್ತಿದ್ದು ಇದು ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಆರ್ಥಿಕತೆ ಸ್ಥಗಿತತೆ (Stagnation) ಮತ್ತು ಹಣದುಬ್ಬರ ಎರಡರ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿದೆ. ಈ ದಿಕ್ಕಿನಲ್ಲಿ ಜನತಾ ಮತ್ತು ಕಾಂಗ್ರೆಸ್ ಸರಕಾರಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ.

ಸಾರ್ವಜನಿಕರಲ್ಲಿ ಹಣದ ಪೂರೈಕೆ ಹೆಚ್ಚಳ:

ಸರಕಾರದ ಈ ರೀತಿಯ ಪರಿಣಾಮಕಾರಿ ಬೇಡಿಕೆಯನ್ನು ಕೃತಕವಾಗಿ ಹೆಚ್ಚಿಸುವ ನೀತಿಯಿಂದ ಸಾರ್ವಜನಿಕರಲ್ಲಿ ಹಣದ ಸಂಚಾರ ವಿಪರೀತವಾಗಿ ಹೆಚ್ಚಿದೆ. ಇದರಿಂದಲೇ ಈಗ ಹಣದುಬ್ಬರ (ವಾರ್ಷಿಕ) ಶೇಕಡಾ 31ರಷ್ಟಾಗಿದೆ. 1974ರಲ್ಲಿ ಇಂದಿರಾ ಆಳ್ವಿಕೆಯಲ್ಲಿ ಸಹ ಸುಮಾರು ಇಷ್ಟೇ ಹಣದುಬ್ಬರ 'ಸಾಧಿಸಲಾಗಿತ್ತು'.

1973ರಿಂದ 1976ರವರೆಗಿನ 3ವರ್ಷಗಳಲ್ಲಿ ಹಣದ ಪೂರೈಕೆಯಲ್ಲಿನ ಹೆಚ್ಚಳ 2625 ಕೋಟಿರೂಗಳಷ್ಟು. 1976 ರಿಂದ 1979ರ 3ವರ್ಷಗಳಲ್ಲಿ ಈ ಹೆಚ್ಚಳ 7257 ಕೋಟಿರೂಗಳು. ಈ ಎರಡನೆಯ ಅವಧಿಯ ಮೊದಲ ವರ್ಷ 1976-77ರಲ್ಲಿ ಇಂದಿರಾ ಆಡಳಿತದಲ್ಲಿ ಒಂದೇ ವರ್ಷದಲ್ಲಿ 2700 ಕೋಟಿರೂಗಳಷ್ಟು ಹಣದ ಪೂರೈಕೆ ಹೆಚ್ಚಾಯಿತು. ಇದೇ ನೀತಿಯನ್ನು ಮುಂದಿನ 2ವರ್ಷಗಳಲ್ಲಿ ಜನತಾ ಸರಕಾರ ಮುಂದುವರಿಸಿತು. ಈ ಮೂರು ವರ್ಷಗಳಲ್ಲಿ ಹಣದ ಪೂರೈಕೆ ವಿಪರೀತ ಹೆಚ್ಚಿರುವುದೇ ಈಗಿನ ಅತ್ಯಧಿಕ ಹಣದುಬ್ಬರಕ್ಕೆ ಕಾರಣ. 1979 ಕೇಂದ್ರೀಯ ಬಜೆಟ್‌ನಲ್ಲಿ ಹೇರಿದ ಅಪ್ರತ್ಯಕ್ಷ ತೆರಿಗೆಗಳಿಂದ ಈ ಪರಿಸ್ಥಿತಿ ಇನ್ನೂ ಹದಗೆಟ್ಟಿದ್ದು ಬೆಲೆಗಳು ಇನ್ನೂ ಹೆಚ್ಚಾಗಿ ಏರುತ್ತಿವೆ.

ಇದು 70ರ ದಶಕದಲ್ಲಿ ದೇಶದ ಆರ್ಥಿಕ ಪರಿಸ್ಥಿತಿಯ ಒಂದು ಪಕ್ಷಿನೋಟ. ಇದರಿಂದ ಹಲವು ಮುಖ್ಯ ತೀರ್ಮಾನಗಳಿಗೆ ಬರಬಹುದು.

* 1971 ರಿಂದ 1977ರವರೆಗಿನ ಇಂದಿರಾ ಆಡಳಿತ 1947ರ ನಂತರದ ಸ್ವತಂತ್ರ ಭಾರತದ ಆರ್ಥಿಕತೆಯ ಚರಿತ್ರೆಯಲ್ಲಿ ಕರಾಳ ಅವಧಿ. ಈ 7 ವರ್ಷಗಳ ಅವಧಿಯ 4 ವರ್ಷಗಳಲ್ಲಿ ನಿಜ ತಲಾರಾಷ್ಟ್ರೀಯ ಆದಾಯ ಮತ್ತು ಕೃಷಿ ಉತ್ಪಾದನೆಯ ಮೊತ್ತ ಗಮನಾರ್ಹವಾಗಿ ಇಳಿಯಿತು; 2ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆಯು ಹೆಚ್ಚು ಕಡಿಮೆ ಸ್ಥಗಿತಗೊಂಡಿತ್ತು. ಈ ಅವಧಿ ಯಾವುದೇ ಅರ್ಥದಲ್ಲಿ 'ಆರ್ಥಿಕ ಸುಭದ್ರತೆ'ಯ ಅವಧಿ ಅಲ್ಲ.

* ಜನತಾ ಅವಧಿ (2ವರ್ಷಗಳ ಚಿಕ್ಕ ಅವಧಿಯಾದರೂ) ಒಟ್ಟಾರೆ ಆರ್ಥಿಕತೆ ಮತ್ತು ಅದರ ಎಲ್ಲಾ ರಂಗಗಳ ಸಾಧನೆಗಳ ದೃಷ್ಟಿಯಿಂದಲೂ ಇಂದಿರಾ ಅವಧಿಗಿಂತ ಉತ್ತಮಕರ. ಇದಕ್ಕೆ ಈ ಅವಧಿ ಚಿಕ್ಕದಾಗಿರುವುದೇ ಮತ್ತು ಇತರ ಕಾರಣಗಳಿರಬಹುದು. ಆದರೆ ಜನತಾ ಆಳ್ವಿಕೆ, ಇಂದಿರಾ ಕಾಂಗ್ರೆಸ್ ಆಳ್ವಿಕೆಗಿಂತ ಕೆಟ್ಟದಾಗಿತ್ತು ಎಂಬ ಇಂದಿರಾ ವಾದದಲ್ಲಿ ಏನೇನೂ ಹುರುಳಿಲ್ಲ ಎಂಬುದು ಸ್ಪಷ್ಟ. ಈ ತುಲನೆಯನ್ನು ಮಾಡಲಾಗುತ್ತಿರುವುದು ಕೇವಲ ಆರ್ಥಿಕತೆಯ ಸಾಮಾನ್ಯ ಪರಿಸ್ಥಿತಿಯ ವಿಷಯದಲ್ಲಿ ಎಂದು ಗಮನಿಸಬೇಕು. ರಾಜಕೀಯ ರಂಗದಲ್ಲಿ ಇಂದಿರಾ ಅವಧಿ ಇನ್ನೂ ಕೆಟ್ಟದಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ.

* ಆದರೆ ಆರ್ಥಿಕ ಪರಿಸ್ಥಿತಿಯ ತಿರುಳನ್ನು ಮೂಲಭೂತವಾಗಿ ಗಮನಿಸಿದರೆ ಇಂದಿರಾ ಆಡಳಿತಕ್ಕೂ ಜನತಾ ಆಡಳಿತಕ್ಕೂ ವ್ಯತ್ಯಾಸಗಳಿಲ್ಲ. ಎರಡೂ ಬೂರ್ಜ್ವಾ-ಜಮೀನುದಾರಿ ವರ್ಗಗಳ ಪಕ್ಷಗಳಾಗಿದ್ದು ಅವುಗಳ ವರ್ಗ ಅಧಿಪತ್ಯ ಹೇಗಾದರೂ ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸಿದವು. ಎರಡರ ಆರ್ಥಿಕ ನೀತಿಯ ತಿರುಳು ಒಂದೇ. ಆದ್ದರಿಂದ ಪರಿಣಾಮ ಸಹ ಬೇರೆಯಾಗುವುದು ಅಸಾಧ್ಯ. ಈಗಾಗಲೇ ದಿವಾಳಿ ಎದ್ದು ಹೋಗಿರುವ ಜಮೀನುದಾರಿ ಗುತ್ತೇದಾರಿ ಬಂಡವಾಳಶಾಹಿ ವ್ಯವಸ್ಥೆಯನ್ನು ಮುಂದುವರಿಸಲು ಕೈಗೊಂಡ ಹಲವು ನೀತಿಗಳಿಂದ ದೇಶ ಸ್ಥಗಿತತೆ ಮತ್ತು ಹಣದುಬ್ಬರದ ಕಪಿಮುಷ್ಟಿಯಲ್ಲಿ ಸಿಕ್ಕುಬಿದ್ದಿದೆ.

70ರ ದಶಕದಲ್ಲಿ ಆದ ಮುಖ್ಯ ಬೆಳವಣಿಗೆಯೆಂದರೆ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸಾರ್ಥಕ ಮುಂದುವರಿಕೆಯ ಎಲ್ಲಾ ಸಾಧ್ಯತೆಗಳು ಮುಗಿದುಹೋಗಿರುವುದು, ಅತ್ಯಂತ ಹೆಚ್ಚಿನ ಪ್ರಮಾಣದ ಹಣದುಬ್ಬರವಲ್ಲದೆ ಬೇರೆ ಯಾವುದೆ ರೀತಿಯಿಂದ ರಾಷ್ಟ್ರೀಯ ಆದಾಯದ ತೋರಿಕೆಯ ಹೆಚ್ಚಳವನ್ನು ಸಾಧಿಸಲು ಸಾಧ್ಯವಿಲ್ಲ. ಇಂತಹ ತೀವ್ರ ಬಿಕ್ಕಟ್ಟಿನಲ್ಲಿ ಸುಭದ್ರತೆ ಮತ್ತು ಶಾಂತಿಯ ಮಾದಕ ಘೋಷಣೆಗಳಿಂದ ಅಧಿಕಾರ ಏರಿರುವ ಇಂದಿರಾ ಸರ್ಕಾರ ಸಹ ಬಂಡವಾಳಶಾಹಿ ರೀತಿಯಲ್ಲೇ ಈ ಪರಿಸ್ಥಿತಿಗೆ ಪ್ರತಿಕ್ರಿಯಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಅಂದರೆ ಇನ್ನೂ ಹೆಚ್ಚಿನ ಹಣ ಪೂರೈಸಿ ಬೇಡಿಕೆ ಕೃತಕವಾಗಿ ಹೆಚ್ಚಿಸುವುದರಿಂದ. ಈ ಕ್ರಮ ಈಗಿನ ಬೆಲೆಗಳಲ್ಲಿ ಹಣದುಬ್ಬರವನ್ನು ಇನ್ನೂ ಹೆಚ್ಚಿಸಿ ಆರ್ಥಿಕತೆಯನ್ನು ಪೂರ್ಣವಾಗಿ ಹದಗೆಡಿಸುವುದು ಎಂಬುದಕ್ಕೆ ಸಂಶಯವಿಲ್ಲ.

ಇದರ ಅರ್ಥ ಬಂಡವಾಳಶಾಹಿ ವ್ಯವಸ್ಥೆ ತನ್ನಿಂದತಾನೆ ಕುಸಿದು ಬೀಳುತ್ತದೆ ಎಂದಲ್ಲ. ಅದು ತನ್ನ ಹೊಸ ಮತ್ತು ಸಮರ್ಥ ನಾಯಕಿಯ ನೇತೃತ್ವದಲ್ಲಿ ತನ್ನ ಅಧಿಪತ್ಯ ಮುಂದುವರಿಸಿಕೊಂಡು ಹೋಗಲು ಏನನ್ನೂ ಮಾಡಲು ಹೇಸುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ವ್ಯವಸ್ಥೆಯ ವಿರುದ್ಧ ಪ್ರಮುಖ ವರ್ಗವಾದ ಕಾರ್ಮಿಕ ವರ್ಗ ತನ್ನ ವರ್ಗ ಶಕ್ತಿಯ ಸಾಮರ್ಥ್ಯ ಮತ್ತು ಬಲವನ್ನು ಇನ್ನಷ್ಟು ಕ್ರೋಢೀಕರಿಸಿ, ಉಳಿದೆಲ್ಲಾ ದುಡಿಯುವ ವರ್ಗಗಳನ್ನು ಒಗ್ಗೂಡಿಸಿ ಹೋರಾಡಬೇಕಾಗಿದೆ. ಮುಂದೆ ಬರುವ ದಿನಗಳು ಭಾರತದ ಚರಿತ್ರೆಯಲ್ಲಿ ನಿರ್ಣಾಯಕವಾಗಲಿವೆ.

"ವೀರಾಜ"

(ಮಾರ್ಕ್ಸಿಸ್ಟ್ ರಿವ್ಯೂನಿಂದ ಸಾಧಾರ)

ಉತ್ತರ ಕನ್ನಡ ಜಿಲ್ಲಾ ಕಿಸಾನ್ ಸಭಾ (AIKS) ದ ಕಾರ್ಯಕಾರಿ ಕಮಿಟಿ ಸಭೆ

ದಿ. 25-12-79ರಂದು ಹಳಗಾ ಗ್ರಾಮದಲ್ಲಿ ಕಾಂ. ಸಾಲುಡಿಸೋಜಾರವರ ಮನೆಯ ಅಂಗಳದಲ್ಲಿ ಸಂಜೆ 7 ಘಂಟೆಗೆ ಕಾಂ. ಉಡಚಪ್ಪಾ ಬೊಬಾಟಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಕಮಿಟಿ ಸೇರಿತು. ಸಭೆಯಲ್ಲಿ ಅಂಗೀಕರಿಸಲಾದ ಠರಾವುಗಳು ಈ ಕೆಳಗಿನಂತಿವೆ.

1. ಕಳೆದ 4 ವರ್ಷಗಳಿಂದಲೂ ತಾತಗುಣಿ ಎಸ್ಟೇಟ್ ಕಾರ್ಮಿಕರು ಸರಕಾರ ನಿಗದಿ ಮಾಡಿರುವ ಕನಿಷ್ಟ ಕೂಲಿ ಜಾರಿ ಮಾಡಬೇಕು, ಕೆಲಸದಿಂದ ನಿವೃತ್ತಿಯಾದ ಕಾರ್ಮಿಕರಿಗೆ ಪರಿಹಾರ, ಹೆರಿಗೆ ರಜಾ ಹೋದ ಮಹಿಳೆಯರಿಗೆ ಹೆರಿಗೆ ಭತ್ಯೆ ಮುಂತಾದ ಬೇಡಿಕೆಗಳನ್ನಿಟ್ಟು ಹೋರಾಟ ಮಾಡುತ್ತಿದ್ದರೂ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದ್ದರೂ ಸರಕಾರ ಗಮನ ಹರಿಸದಿದ್ದರಿಂದ ದಿ.22-8-79ರಿಂದ 'ಅನಿರ್ದಿಷ್ಟ ಕಾಲದ ಮುಷ್ಕರ' ಆರಂಭಿಸಿದ್ದಾರೆ. ಕಾರಣ ಹರಿಜನರ ಉದ್ಧಾರದ ಮಾತನ್ನಾಡಿ ಹರಿಜನರ ಕಣ್ಣಿಗೆ ಮಣ್ಣೆರಚುವ ಈ ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ಖಂಡಿಸಿ ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟದ ಯಶಸ್ಸಿಗಾಗಿ ಸಭೆಯು ಬೆಂಬಲಿಸಲು ಠರಾಯಿಸಿದೆ.

2. ಚಿಕ್ಕಮಗಳೂರು ಜಿಲ್ಲೆಯ ಮುಡಿಗೆರೆಯಲ್ಲಿ ದಿ. 24-11-79 ರಂದು ತೋಟದ ಕೆಲಸಗಾರನಾದ ಶಂಭುವನ್ನು ತೋಟದ ಮಾಲೀಕ ಶ್ರೀಕಂಠೇಗೌಡನ ಸಿರಿವಂತಿಕೆಯ ಪ್ರಭಾವಕ್ಕೊಳಗಾದ ಆನಂದ ಮತ್ತು ಬಸವರಾಜುವೆಂಬ ಪೋಲೀಸ್ ಪೇದೆಗಳು ನಿರ್ದಯೆಯಿಂದ ಕೊಂದು ಹಾಕಿದ್ದರೂ ಈವರೆಗೆ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿ ಮೃತರ ಮಡದಿ ಮಕ್ಕಳಿಗೆ ಯೋಗ್ಯ ಪರಿಹಾರ ನೀಡದ ಈ ಸರಕಾರದ ಹಿಂಸಾತ್ಮಕ ನೀತಿಗೆ ಧಿಕ್ಕರಿಸಿ, ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಬೇಕು, ಮೃತನ ಕುಟುಂಬಕ್ಕೆ ಪರಿಹಾರ ಕೊಡಲು ಒತ್ತಾಯಿಸುವುದು, ನಿಷ್ಪಕ್ಷಪಾತ ನ್ಯಾಯಾಂಗ ತನಿಖೆ ನಡೆಯಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

3. ಕಳೆದ ಒಂದೂವರೆ ವರ್ಷದಿಂದ ಗ್ರೆಡೇಷನ್, ತುಟ್ಟಿ ಭತ್ತೆ ಮುಂತಾದ 13 ಬೇಡಿಕೆಗಳನ್ನಿಟ್ಟು ಹೋರಾಟಗಳನ್ನು ಮಾಡುತ್ತಾ ಬಂದಿದ್ದಾರೆ. ಈ ಮಧ್ಯೆ ಡೈರೆಕ್ಟರ್ ಆಫೀಸಿನಲ್ಲಿ ಚರ್ಚಿಸಿ 21-11-79ರೊಳಗೆ ತೀರ್ಮಾನಕ್ಕೆ ಬರುವುದಾಗಿ ಆಶ್ವಾಸನೆಯಿತ್ತ ಆಡಳಿತ ವರ್ಗವು ಯಾವ ತೀರ್ಮಾನಕ್ಕೂ ಬಾರದಿದ್ದರಿಂದ 22-11-79ರಂದು ಬೆಳಿಗ್ಗೆ 7-00ಗಂಟೆಯಿಂದ ಅನಿರ್ದಿಷ್ಟ ಮುಷ್ಕರದ ಮೇಲಿದ್ದಾರೆ. ಎರಡು ತಿಂಗಳಾದರೂ ಸರಕಾರ ಗಮನಹರಿಸಲಿಲ್ಲ. ಆದ್ದರಿಂದ ಸರಕಾರದ ಈ ಕಾರ್ಮಿಕ ವಿರೋಧಿ ನೀತಿಗೆ ಖಂಡಿಸಿ ದಾಂಡೇಲಿ ಪೇಪರ್ ಮಿಲ್ಲಿನ ನೌಕರರ ಮುಷ್ಕರದ ಯಶಸ್ಸಿಗೆ ಬೆಂಬಲಿಸುತ್ತದೆ.

●

ದಾಂಡೇಲಿಯಲ್ಲಿ ವಿಜಯೋತ್ಸವ

ಏಳನೇ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳು, ಅದರಲ್ಲೂ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದದ್ದಕ್ಕಾಗಿ ವಿಜಯೋತ್ಸವವನ್ನು ಅತ್ಯಂತ ಉತ್ಸಾಹದಿಂದ ಆಚರಿಸಲಾಯಿತು. ಉ.ಕ. ಜಿಲ್ಲೆಯ ಕಾರ್ಮಿಕರ ಕೇಂದ್ರ, ದಾಂಡೇಲಿಯ ಸಿ.ಪಿ.ಐ (ಎಂ) ಕಛೇರಿಯನ್ನು ತಳಿರು ತೋರಣಗಳಿಂದ, ಕೆಂಬಾವುಟಗಳಿಂದ ಅಲಂಕರಿಸಲಾಗಿತ್ತು. ಶೃಂಗರಿಸಲ್ಪಟ್ಟ ವೇದಿಕೆಯ ಮುಂದೆ ಕಾಂ. ಲೆನಿನ್ ಮತ್ತು ಸ್ಟಾಲಿನ್ ಭಾವಚಿತ್ರಗಳನ್ನು ಹಾಕಲಾಗಿತ್ತು.

ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸ್ಥಳೀಯ ಸಿ. ಪಿ. ಐ. (ಎಂ) ಮುಖಂಡ ಕಾಂ. ಜಿ ವಿ. ಪವಾರ್ ಹಿಂದುಸ್ಥಾನದಲ್ಲಿ ಮತ್ತೆ ಸರ್ವಾಧಿಕಾರಿ ಶಕ್ತಿಗಳು ಸಕ್ರಿಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿರುವುದು ದೇಶದಲ್ಲಿ ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಗಂಡಾಂತರವಿದೆ ಎಂದರು.

ಮುಂದುವರೆದು, ದೇಶವನ್ನು ಅಪಾಯದಿಂದ ಪಾರುಮಾಡಲು ಜನತೆ ಬರಲಿರುವ ದಿನಗಳಲ್ಲಿ ಒಗ್ಗಟ್ಟಿನಿಂದ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆಯಿತ್ತರು. ಅನಂತರ ಸಿ ಪಿ. ಐ. (ಎಂ) ಹಾಗೂ ಸಿ. ಐ. ಟಿ. ಯು. ಮುಖಂಡರಾದ ಟಿ. ಟಿ. ನಾಯಕ್, ಧರ್ಮೇಂದ್ರ ಜಮಾದಾರ, ಇಮಾಮ ಸಾಬ್ ಮುಂತಾದವರು ಮಾತನಾಡಿ, ಕೇರಳ, ಪ.ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೇಗೆ ಜನಗಳಿಗೆ ನಾಯಕತ್ವ ಕೊಡುತ್ತಿದೆಯೋ, ಅದೇ ರೀತಿ ಕರ್ನಾಟಕದಲ್ಲಿ ಕೆಂಬಾವುಟದ ಸರಕಾರ ಬರಬೇಕಾದರೆ ಈಗಿನಿಂದಲೇ ಜನತೆಯ ಸಮಸ್ಯೆಗಳಿಗಾಗಿ ಹೋರಾಡುವುದರ ಮೂಲಕ ಬೂರ್ಜ್ವಾ ಪಕ್ಷಗಳ ಪೊಳ್ಳುತನವನ್ನು ಬಯಲಿಗೆಳೆಯಬೇಕು ಎಂದರು.

ಉತ್ಸಾಹದ ಕ್ರಾಂತಿಗೀತೆಗಳ ನಂತರ, ಎಲ್ಲರಿಗೂ ಸಿಹಿಯನ್ನು ಹಂಚಲಾಯಿತು.

●

ಉತ್ತರ ಕನ್ನಡ ಜಿಲ್ಲಾ ಕಿಸಾನ್ ಸಭಾದ ದ್ವಿತೀಯ ಸಮ್ಮೇಳನ ಹಳಿಯಾಳದಲ್ಲಿ ಸೇರಲಿದೆ

ಫೆಬ್ರವರಿ 9 ಮತ್ತು 10 ಎರಡು ದಿನಗಳ ಜಿಲ್ಲಾ ಸಮ್ಮೇಳನವು ಹಳಿಯಾಳದಲ್ಲಿ ಕರೆಯಲು ನಿರ್ಧರಿಸಲಾಗಿದೆ.

ಸಮ್ಮೇಳನಕ್ಕೆ ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷಿಣಿ ಕಾಂ. ಗೋದಾವರಿ ಪರುಳೇಕರ್, ಕರ್ನಾಟಕ ರಾಜ್ಯ ಕಿಸಾನ್ ಸಭಾದ ಅಧ್ಯಕ್ಷ ಕಾಂ. ಎಚ್. ಮುಂಗುವಾಳಪ್ಪ, ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್, ಕರ್ನಾಟಕ ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿ ಕಾಂ. ಎಂ. ಕೆ. ಭಟ್ ಹಾಗೂ ಎನ್. ಎಲ್. ಉಪಾಧ್ಯಾಯರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ.

ಧ್ವಜಾರೋಹಣ :

ಕಾಂ. ಎನ್. ಜಿ. ಮಾಳಸೇಕರ್

ಉದ್ಘಾಟನೆ :

ಕಾಂ. ಎನ್. ಎಲ್. ಉಪಾಧ್ಯಾಯ

ಪ್ರತಿನಿಧಿ ಸಭೆಯನ್ನುದ್ದೇಶಿಸಿ ಕಾಂ. ಗೋದಾವರಿ ಪರುಳೇಕರ್, ಕಾಂ. ಎಂ. ಕೆ. ಭಟ್ ಮಾತನಾಡುವರು. ಎರಡನೇ ದಿವಸ ಸಂಘಟನಾ ವಿಷಯದ ಬಗ್ಗೆ ಚರ್ಚೆ ಮತ್ತು ನಿರ್ಣಯಗಳು. ಸಂಜೆ 3 ಘಂಟೆಗೆ ಸಾರ್ವಜನಿಕ ಸಭೆ.

ದಿ. 25-12-79 ರಂದು ಸೇರಿದ್ದ ಉತ್ತರ ಕನ್ನಡ ಜಿಲ್ಲಾ ಕಿಸಾನ್ ಸಭಾ (AIKS)ದ ಜಿಲ್ಲಾ ಕಾರ್ಯಕಾರಿ ಸಮಿತಿಯು ಈ ಮೇಲಿನಂತೆ ನಿರ್ಧರಿಸಿದೆ. ○

ರಾಜಸ್ಥಾನ ಸರಕಾರ ಏನು ಮಾಡುತ್ತಿದೆ?

ರಾಜಸ್ಥಾನ ರಾಜ್ಯ ಸರಕಾರೀ ನೌಕರರ ಮುಷ್ಕರವನ್ನು ಹತ್ತಿಕ್ಕಲು ಅವಶ್ಯಕ ಸೇವಾ ನಿಯಮವನ್ನು ಜಾರಿಗೆ ತಂದು ಮಾತುಕತೆಯ ಮುಖಾಂತರ ಹೊಂದಾಣಿಕೆ ಬರುವುದನ್ನು ತಡೆಗಟ್ಟಿ ಕಾರ್ಮಿಕ ಮುಖಂಡರನ್ನು ಬಂಧಿಸಲಾಗಿದೆ. ಸರಕಾರದ ಈ ಕಾರ್ಮಿಕ ವಿರೋಧಿ ನೀತಿಯನ್ನು ಎಲ್ಲ ಕಾರ್ಮಿಕ ಸಂಘಟನೆಗಳು ಒಮ್ಮುಖವಾಗಿ ವಿರೋಧಿಸಲಾಗಿದೆ.

ಈ ಕಪ್ಪು ಕಾನೂನು ಶಾಸಕಾಂಗದ ನಿಜಸ್ವರೂಪವನ್ನು ಬಯಲಿಗೆಳೆದಿದೆ.

ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಹೇಳಿಕೆ

(3ನೇ ಪುಟದಿಂದ)

ಇಂದಿರಾ ಕಾಂಗ್ರೆಸ್ಸಿನ ಪ್ರಚಂಡ ವಿಜಯ ದೇಶಕ್ಕೆ ಸುಭದ್ರ ಸರಕಾರ ಕೊಡುತ್ತದೆಂದು ಭಾವಿಸುವುದು ನಿರರ್ಥಕ. 1971ರಲ್ಲಿ ಕಾಂಗ್ರೆಸ್ಸಿಗೆ, 1977ರಲ್ಲಿ ಜನತಾ ಪಕ್ಷಕ್ಕೆ ಬಹುಮತಗಳು ಬಂದರೂ ಸುಭದ್ರ ಸರಕಾರಗಳನ್ನು ನೀಡುವುದಕ್ಕೆ ಸಾಧ್ಯವಾಗಲಿಲ್ಲ. ಬಹುಮತ ಸಿಕ್ಕಿದ ಮಾತ್ರಕ್ಕೆ ಇಂದಿರಾ ಕಾಂಗ್ರೆಸ್ಸಿನಿಂದ ಜನತೆಯ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಆರ್ಥಿಕ ಬಿಕ್ಕಟ್ಟು, ಬೆಲೆ ಏರಿಕೆ, ನಿರುದ್ಯೋಗಗಳನ್ನು ಅಳಿಸಬೇಕಾದರೆ ಭಿನ್ನವಾದ ವರ್ಗ ಧೋರಣೆಯನ್ನು ಅನುಸರಿಸಬೇಕಾಗುತ್ತದೆ. ಯಾವ ಜನತೆ ಇಂದಿರಾಗಾಂಧಿಯವರಿಗೆ ಓಟು ಕೊಟ್ಟಿತೋ ಅದೇ ಜನತೆ, ಸಂಕಷ್ಟಗಳು ಹೆಚ್ಚಾಗಿ, ಪ್ರತಿಭಟನೆಗಳು ಬೆಳೆದಂತೆ ಭ್ರಮೆಯನ್ನು ತೊರೆಯುತ್ತಾರೆ, ಆದ್ದರಿಂದ ಸವಾಲನ್ನು ಧೈರ್ಯವಾಗಿ ಎದುರಿಸಿ, ಸರ್ವಾಧಿಕಾರದ ವಿರುದ್ಧ ಯುದ್ಧವನ್ನು ಮುಂದುವರೆಸಬೇಕಾಗಿದೆ. ಆರ್ಥಿಕ ಬೇಡಿಕೆಗಳು ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳ ಉಳಿವಿಗಾಗಿ ಈ ಎರಡೂ ಹೋರಾಟಗಳನ್ನು ಒಂದೇ ಹೋರಾಟವನ್ನಾಗಿ ಮಾಡಬೇಕಾಗಿದೆ.

ಕೇರಳ ವಿಧಾನ ಸಭೆಗೆ ಚುನಾವಣೆಗಳು ಹತ್ತಿರ ಬರುತ್ತಿವೆ, ಸರ್ವಾಧಿಕಾರಿ ಶಕ್ತಿಗಳಿಗೆ ಸರಿಯಾದ ಉತ್ತರ ಕೊಡುವ ಮತ್ತೊಂದು ಅವಕಾಶ ಕೇರಳದ ಜನತೆಗೆ ಸಿಕ್ಕಿದೆ. ಇಂದಿರಾ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳನ್ನು ಮಣ್ಣು ಮುಕ್ಕಿಸಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ರಂಗವನ್ನು ಅಧಿಕಾರಕ್ಕೆ ತರಬೇಕೆಂದು ಕೇರಳದ ಜನತೆಗೆ ಸಿ. ಪಿ. ಐ. (ಎಂ) ಪೊಲಿಟ್ ಬ್ಯೂರೋ ಮನವಿ ಮಾಡಿದೆ. ●

ಕಟ್ಟಿಗೆ ಬೆಲೆ ನಿಯಂತ್ರಣ ಯಶಸ್ವೀ ಹೋರಾಟ

ಉ. ಕ. ಜಿಲ್ಲೆಯ ದಾಂಡೇಲಿಯಲ್ಲಿ ತಾ. 4-1-80 ರಂದು ಸಿ. ಪಿ. ಐ. (ಎಂ) ಮತ್ತು ಸಿ. ಐ. ಟಿ. ಯು. ಘಟಕಗಳ ನೇತೃತ್ವದಲ್ಲಿ ಜಲಾವ ಕಟ್ಟಿಗೆಯ ಬೆಲೆ ನಿಯಂತ್ರಣದ ಸ್ಥಳೀಯ ಆರ್. ಎಫ್. ಓ. ಕಛೇರಿಯ ಮುಂದೆ ನಡೆಸಿದ ಹೋರಾಟವು ಯಶಸ್ವಿಯಾಗಿ ಕೊನೆಗೊಂಡಿತು. ಹೋರಾಟದ ಫಲವಾಗಿ ಕಟ್ಟಿಗೆಯ ಬೆಲೆಯು ಮಣಕ್ಕೆ ರೂ. 8-20ಕ್ಕೆ ಏರಿದ್ದನ್ನು ರೂ. 4-60ಕ್ಕೆ ಇಳಿಸಲಾಗಿದೆ.

ಬೆಲೆ ಇಳಿದು, ಜನಗಳಿಗೆ ಸುಲಭವಾಗಿ ಕಟ್ಟಿಗೆ ಸಿಗುವಂತೆ ಮಾಡಿದ್ದಕ್ಕಾಗಿ ಜನತೆ ಸಿ. ಪಿ. ಐ. (ಎಂ) ಮತ್ತು ಸಿ ಐ ಟಿ. ಯು. ಗಳನ್ನು ಅಭಿನಂದಿಸಿದ್ದಾರೆ.

"ಆಪರೇಷನ್ ಬಾರ್ಗಾ" ಬಗ್ಗೆ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘದ ಆಸಕ್ತಿ

ಪಶ್ಚಿಮ ಬಂಗಾಳ ಎಡರಂಗ ಸರ್ಕಾರ ಜಾರಿ ಮಾಡಿರುವ "ಆಪರೇಷನ್ ಬಾರ್ಗಾ" ಭೂ ಸುಧಾರಣಾ ಪದ್ಧತಿಯ ಬಗ್ಗೆ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘ ಹಾಗೂ ಭಾರತದ ಯೋಜನಾ ಆಯೋಗಗಳು ಆಸಕ್ತಿ ತೋರಿಸಿವೆ

ಇತ್ತೀಚೆಗೆ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘ 'ಗ್ರಾಮಾಂತರ ಹಿಂದುಳಿಯುವಿಕೆಯನ್ನು ನಿವಾರಿಸುವುದು ಹೇಗೆ?' ಎಂಬ ಪುಸ್ತಕವನ್ನು ಪ್ರಕಟಿಸಿದೆ. ಇದರಲ್ಲಿ ವಿವಿಧ ದೇಶಗಳ ಭೂ ಸುಧಾರಣಾ ಪದ್ಧತಿ ಮತ್ತು ಗ್ರಾಮಾಂತರ ಅಭಿವೃದ್ಧಿ ಕೆಲಸ ಹೇಗೆ ನಡೆಯುತ್ತಿದೆ ಎಂಬುದನ್ನು ವಿವರಿಸಿದೆ, ಅಲ್ಲದೆ ಆಯಾ ದೇಶಗಳ ಜನಗಳ ಅನುಭವವನ್ನೂ ಕೊಡಲಾಗಿದೆ. ಪಶ್ಚಿಮ ಬಂಗಾಳವನ್ನು ಭಾರತದ ಒಂದು ಮುಖ್ಯ ರಾಜ್ಯವೆಂದು ಕರೆದಿರುವ ಪುಸ್ತಕ, ಭೂ ಸುಧಾರಣೆಯನ್ನು ಜಾರಿಗೆ ತರಲು ಸರಕಾರ ಕೈಗೊಂಡಿರುವ ವಿವಿಧ ಯೋಜನೆಗಳು ಹಾಗೂ ಯೋಜನೆಯನ್ನು ಜಾರಿಗೊಳಿಸುವಲ್ಲಿ ಸರಕಾರದ ಅನುಭವವನ್ನು ಕೂಲಂಕುಷವಾಗಿ ವಿವರಿಸಲಾಗಿದೆ.

ಪಶ್ಚಿಮ ಬಂಗಾಳ ಸರಕಾರ ಭೂ ಸಂಬಂಧಗಳ ಬಗ್ಗೆ ಮೂಲಭೂತ ಬದಲಾವಣೆಯನ್ನು ತರಲು ಪ್ರಯತ್ನಿಸಿದೆ ಎಂದು ಪುಸ್ತಕ ಟಿಪ್ಪಣಿ ನೀಡಿದೆ. ಅಲ್ಲದೆ ಪಶ್ಚಿಮ ಬಂಗಾಳ ಸರಕಾರದ ದೃಷ್ಟಿಕೋನ ಹಾಗೂ ಕಾರ್ಯಕ್ರಮಗಳು ದೇಶದ ಇತರೆ ರಾಜ್ಯಗಳ ಕಾರ್ಯಕ್ರಮಕ್ಕಿಂತ ಭಿನ್ನವಾಗಿದೆ ಎಂದು ಪುಸ್ತಕ ವಿವರಣೆ ನೀಡಿದೆ.

ಯೋಜನಾ ಆಯೋಗದ ಸದಸ್ಯ ಶ್ರೀ ಜಿ.ವಿ ಕೆ.ರಾವ್ ಪ.ಬಂಗಾಳದ ಭೂಸುಧಾರಣಾ ಕಮೀಷನರ್ ದೇವವ್ರತ ಬಂದೋಪಾಧ್ಯಾಯ ಅವರಿಗೆ ಪತ್ರ ಬರೆದು ಪ.ಬಂಗಾಳ ಎಡರಂಗ ಸರ್ಕಾರಕ್ಕೆಗೊಂಡಿರುವ ಭೂಸುಧಾರಣಾ ಕಾರ್ಯಕ್ರಮದ ವಿವರವನ್ನು ತಿಳಿಯಲು ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. "ಆಪರೇಷನ್ ಬಾರ್ಗಾ" ಬಗ್ಗೆ ಹೆಚ್ಚಿನ ವಿವರಗಳನ್ನು ಸ್ಥಳಕ್ಕೆ ಭೇಟಿ ಕೊಟ್ಟು ತಿಳಿಯಲು ರಾಜ್ಯಕ್ಕೆ ಭೇಟಿ ಕೊಡಲು ಆಸೆಯನ್ನು ವ್ಯಕ್ತಪಡಿಸಿದ್ದಾರೆ.

ಆಪರೇಷನ್ ಬಾರ್ಗಾ ಮೂಲಕ ಬಾರ್ಗಾದಾರ್ (ಗೇಣಿದಾರರು) ಹೆಸರುಗಳನ್ನು ರಿಜಿಷ್ಟರ್ ಮಾಡುವುದಲ್ಲದೆ, ಜಮೀನುದಾರರಿಂದ ಗೇಣಿದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲಾಗಿದೆ. ಇದರಿಂದ ರಾಜ್ಯದಲ್ಲಿ ಭೂಸುಧಾರಣೆಯನ್ನು ವ್ಯಾಪಕವಾಗಿ ಜಾರಿಗೆ ತರಲು ಹಾಗೂ ಇಡೀ ದೇಶದಲ್ಲಿ ಮಾದರಿ ಭೂಸುಧಾರಣಾ ಕಾರ್ಯಕ್ರಮವನ್ನಾಗಿ ಮಾಡಲು ಉದ್ದೇಶಿಸಲಾಗಿದೆ. ○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಬಹುರಾಷ್ಟ್ರೀಯ ಸಂಸ್ಥೆ ಪ್ರೋಟಿನೆಕ್ಸ್ ಮಾರಾಟ ಮಾಡುವುದರ ವಿರುದ್ಧ ತಡೆಯಾಜ್ಞೆ

ಗ್ರಾಹಕರ ಪ್ರತಿರೋಧ ಚಳುವಳಿಯ ಪ್ರಧಾನ ಕಾರ್ಯದರ್ಶಿ ಅಡ್ವೋಕೇಟ್ ಮಾಥ್ಯೂ ಜಚಾರಿಯಾ ಕೇರಳ ಹೈಕೋರ್ಟಿನಲ್ಲಿ ಫೈಜರ್ ಲಿಮಿಟೆಡ್ (Pfizer Limited) ಕಂಪನಿಗೆ ನೀಡಿರುವ ತಯಾರಿಕಾ ಪರವಾನಗಿ ಕ್ರಮಬದ್ಧತೆಯನ್ನು ಪ್ರಶ್ನಿಸಿ ರಿಟ್ ಅರ್ಜಿಯೊಂದನ್ನು ದಾಖಲು ಮಾಡಿದ್ದಾರೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಪ್ರೋಟಿನೆಕ್ಸ್ ವಸ್ತುವನ್ನು 1975ಕ್ಕೆ ಮೊದಲು ಔಷಧಿಯೆಂದು ಮಾರಾಟವಾಗುತಿದ್ದು ನಂತರ ಅದನ್ನು ಆಹಾರ ಪದಾರ್ಥವನ್ನಾಗಿ ಮಾಡಲಾಗಿದ್ದು, ಈಗ ಕೆಲವು ತಿಂಗಳ ಹಿಂದೆ ಪ್ರೋಟಿನೆಕ್ಸ್ ಮತ್ತೆ ಔಷಧಿ ರೂಪದಲ್ಲಿ ಮಾರುಕಟ್ಟೆಗೆ ಫೈಜರ್ ಲಿಮಿಟೆಡ್ ಸಂಸ್ಥೆಗೆ ನೀಡಿದ ಪರವಾನಗಿ ಸಂ. 212ರ ಮೂಲಕ ಬರಲಾರಂಭಿಸಿದೆ ಎಂದಿದ್ದಾರೆ.

115ಗ್ರಾಂ ತೂಕದ ಎರಡು ಪ್ರೋಟಿನೆಕ್ಸ್ ಡಬ್ಬಗಳನ್ನು ಕೋರ್ಟಿನ ಮುಂದೆ ಹಾಜರು ಪಡಿಸಲಾಯಿತು. ಅರ್ಜಿದಾರರ ಪ್ರಕಾರ ಒಳಗಿರುವ ಪದಾರ್ಥ ಎರಡೂ ಡಬ್ಬಗಳಲ್ಲಿ ಒಂದೇ ಆದರೂ, ಅವುಗಳಿಗೆ ಅಂಟಿಸಿರುವ ಚೀಟಿಗಳು ಮಾತ್ರ ಬೇರೆಬೇರೆಯಾಗಿದೆ. ಒಂದು ಡಬ್ಬಿಯ ಮೇಲೆ ಅದನ್ನು ಉಪಯೋಗಿಸುವುದು ಹೇಗೆ ಎಂಬುದಕ್ಕೆ ಮಾತ್ರ ಸೂಚನೆ ಕೊಡಲಾಗಿದೆ, ಅದು ಆಹಾರ. ಮತ್ತೊಂದರ ಮೇಲೆ ಉಪಯೋಗಿಸಬೇಕಾದ ಪ್ರಮಾಣ, ಕೊನೆಯ ತಾರೀಖು ಮುಂತಾದವನ್ನು ಕೊಡಲಾಗಿದೆ, ಅದು ಔಷದ. ತಯಾರಕರು ಆಹಾರ ಪದಾರ್ಥವನ್ನು ಬೇರೆ ಬೇರೆ ಚೀಟಿಗಳನ್ನು ಅಂಟಿಸುವುದರ ಮೂಲಕ ಔಷಧಿಯೆಂದು ಮಾರಾಟ ಮಾಡುತ್ತಿರುವುದಾಗಿ ಅರ್ಜಿದಾರರು ತಿಳಿಸಿದ್ದಾರೆ.

ತಯಾರಕರ ಈ ಕ್ರಮವು ಔಷಧಿ ಮತ್ತು ಪ್ರಸಾಧನ ಕಾಯ್ದೆಯ 17ಮತ್ತು18ನೇ ಕಲಂಗಳಿಗೆ ವಿರುದ್ಧವಾದದ್ದೆಂದು ವಾದಿಸಿದ್ದಾರೆ. ಪ್ರೋಟಿನೆಕ್ಸ್‌ನ್ನು ತಪ್ಪಾಗಿ ಗುರುತಿಸಿರುವುದರಿಂದ ಮಾರುಕಟ್ಟೆಯಲ್ಲಿ ಮಾರಾಟ ಮಾಡಬಾರದೆಂದು ಕೇಳಿಕೊಂಡಿದ್ದಾರೆ, ಅಲ್ಲದೆ ಭಾರತ ಸರ್ಕಾರಕ್ಕೆ ನಿಜಸಂಗತಿಯನ್ನು ಮರೆಮಾಡಿ ಪರವಾನಗಿ ಪಡೆದಿರುವುದರಿಂದ ಪ್ರೋಟಿನೆಕ್ಸ್ ಮಾರುವುದಕ್ಕೆ ಕೂಡಲೇ ತಡೆಯಾಜ್ಞೆ ನೀಡಬೇಕೆಂದು ವಾದವನ್ನು ಮುಂದಿಟ್ಟರು.

ನ್ಯಾಯಾಧೀಶ ಎನ್.ಡಿ.ಪಿ.ನಂಬೂದಿರಿಪಾಡ್ ರಿಟ್ ಅರ್ಜಿಯನ್ನು ವಿಚಾರಣೆಗಾಗಿ ಸ್ವೀಕರಿಸಿ ಪ್ರೋಟಿನೆಕ್ಸ್ ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೆ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದಾರೆ.



ದಲಿತರ ರಕ್ತ ಹೀರುವ ಖ್ಯಾತ ಚಿತ್ರ ನಟಿ ದೇವಿಕಾರಾಣಿ ವಿರುದ್ಧ ಜನವರಿ 3 ರಂದು ಬೆಂಗಳೂರಿನಲ್ಲಿ ಪ್ರತಿಭಟಿಸಿದ ಬೆಂಗಳೂರು ಜಿಲ್ಲಾ ರೈತಸಂಘದ ಸದಸ್ಯರನ್ನು ಪೋಲೀಸರು ಬಂಧಿಸಿದರು.

REG. KRNB-368 MAG (2) PRB DECR 319/78-79

ಪ. ಬಂಗಾಳ, ತ್ರಿಪುರಾ ಮತ್ತು ಕೇರಳದ ಜನತೆಗೆ ವಂದನೆಗಳು

[2ನೇ ಪುಟದಿಂದ]

ಕೇರಳ :

30. ಕಾಸರಗೋಡು : ಎಂ. ರಾಮಣ್ಣ ರೈ	73,293	ಜನತಾ
31. ಕ್ಯಾಲಿಕಟ್ : ಇ. ಕೆ. ಇಂಬಿಚ್ಚಿ ಬಾವ	40,669	"
32. ಒಟ್ಟಪ್ಪಾಲಮ್ : (ಮೀಸಲು) ಎ. ಕೆ. ಬಾಲನ್	13,722	ಕಾಂಗ್ರೆಸ್ (ಐ)
33. ಇಡುಕ್ಕಿ : ಎಂ. ಎಂ. ಲಾರೆನ್ಸ್	7,027	ಕೇರಳ ಕಾಂಗ್ರೆಸ್ (ಜೋಸೆಫ್‌ಗುಂಪು)
24. ಮುಕುಂದ ಪುರಂ : ಇ. ಬಾಲಾನಂದನ್	65,131	ಕಾಂಗ್ರೆಸ್ (ಐ)
35. ಆಲೆಪ್ಪಿ : ಸುಶೀಲಾ ಗೋಪಾಲನ್	1,14,764	ಜನತಾ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ.ಬಂಗಾಳದಲ್ಲಿ ರಾಯ್‌ಗಂಜ್ ಕ್ಷೇತ್ರ (ಅಬ್ದುಲ್ ಹಾಫೀಜ್-1305 ಮತಗಳಿಂದ), ಮಾಲ್ಡಾ (ದಿನೇಶ್ ಜೋರ್‌ದಾರ್-11,759 ಮತಗಳಿಂದ) ಮತ್ತು ಅಸಾನ್‌ಸೋಲ್ (ರಾಬಿನ್‌ಸೆನ್-9714 ಮತಗಳಿಂದ) ಕ್ಷೇತ್ರಗಳನ್ನು ಪಡೆಯುವುದರಲ್ಲಿ ವಿಫಲವಾಗಿದೆ. ಫಾರ್ವರ್ಡ್ ಬ್ಲಾಕ್ ಪಕ್ಷ ಕಲ್ಕತ್ತಾ ಉತ್ತರ-ಪಶ್ಚಿಮ ಕ್ಷೇತ್ರದಲ್ಲಿ ಸೋತಿದೆ.

33 ಸ್ಥಾನಗಳಿಗೆ ಸ್ಪರ್ಧಿಸಿದ್ದ ಜನತಾಪಕ್ಷ, 19 ಸ್ಥಾನಗಳಿಗೆ ಸ್ಪರ್ಧಿಸಿದ್ದ ಕಾಂಗ್ರೆಸ್ (ಯು), 15 ಸ್ಥಾನಗಳಿಗೆ ಸ್ಪರ್ಧಿಸಿದ್ದ ಜನತಾ (ಎಸ್), ಎಸ್. ಯು. ಸಿ. ಐ. ಮತ್ತು ಅಮ್ರ ಬಂಗಾಲಿಗಳು ಒಂದು ಸ್ಥಾನವನ್ನೂ ಪಡೆಯಲು ಸಾಧ್ಯವಾಗಲಿಲ್ಲ.

ಕೇರಳ ರಾಜ್ಯದಲ್ಲಿ ಪಾಲ್ಘಾಟ್ ಕ್ಷೇತ್ರದಲ್ಲಿ 11,826 ಮತಗಳಿಂದ ಸಿ. ಪಿ. ಐ. (ಎಂ) ಕಾಂಗ್ರೆಸ್ (ಐ) ಮೇಲೆ ಜಯಗಳಿಸಲು ವಿಫಲವಾಯಿತು.

ಇತರೆ ರಾಜ್ಯಗಳಲ್ಲಿ :

ಸಿ. ಪಿ. ಐ. (ಎಂ) ಇತರೆ ರಾಜ್ಯಗಳಲ್ಲಿ ಒಂದು ಸ್ಥಾನವನ್ನು ಸಹಾ ಪಡೆಯುವುದಕ್ಕೆ ಆಗಲಿಲ್ಲ. ಆಂಧ್ರದಲ್ಲಿ 5 ಸ್ಥಾನಗಳು, ಮಹಾರಾಷ್ಟ್ರದಲ್ಲಿ ನಾಲ್ಕು, ತಮಿಳುನಾಡು ಬಿಹಾರ್‌ಗಳಲ್ಲಿ ತಲಾ ಮೂರು, ಉ. ಪ್ರ, ರಾಜಾಸ್ಥಾನ, ಪಂಜಾಬ್, ಮಧ್ಯಪ್ರದೇಶ, ಕರ್ನಾಟಕ, ಒರಿಸ್ಸಾ, ಅಸ್ಸಾಂ ತಲಾ ಒಂದು ಸ್ಥಾನಗಳಲ್ಲಿ ಪಕ್ಷ ಸೋತಿವೆ.

ಪಾಂಡಿಚರಿಯ ಮಾಹೆ ಮತ್ತು ತಮಿಳುನಾಡಿನ ವಿಳವಂಕೋಡೆ ವಿಧಾನ ಸಭಾ ಸ್ಥಾನಗಳನ್ನು ಸಿ. ಪಿ. ಐ. (ಎಂ) ಗೆದ್ದುಕೊಂಡಿದೆ. ●

ಸಂಪಾದಕೀಯ

[ಒಂದನೇ ಪುಟದಿಂದ]

ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಿ. ಬಿ. ಹೇಳಿಕೆಯಲ್ಲಿ ಈ ರೀತಿ ನಮೂದಿಸಲಾಗಿದೆ.

"ಇಂದಿರಾ ಕಾಂಗ್ರೆಸ್ಸಿಗೆ ದೊರೆತ ದೊಡ್ಡ ಬಹುಮತವು ಜನತೆಗೆ ಸುಭದ್ರತೆಯನ್ನು ನೀಡುವುದೆಂದು ತಿಳಿಯುವುದು ಅರ್ಥವಿಲ್ಲದ್ದಾಗಿದೆ. 1971 ರಲ್ಲಿ ಕಾಂಗ್ರೆಸ್ಸೂ, 1977 ರಲ್ಲಿ ಜನತಾಪಕ್ಷವೂ ಭಾರಿ ಬಹುಮತ ಗಳಿಸಿದುವು. ಆದರೆ ಇವೆರಡೂ ಜನತೆಗೆ ಸುಭದ್ರತೆಯನ್ನೊದಗಿಸುವುದರಲ್ಲಿ ವಿಫಲವಾದುವು. ಇಂದಿರಾ ಕಾಂಗ್ರೆಸ್ಸಿಗೆ ಭಾರಿ ಬಹುಮತ ದೊರೆತರೂ ಜನತೆಯ ಯಾವ ಮೂಲಭೂತ ಸಮಸ್ಯೆಗಳೂ ಪರಿಹಾರವಾಗಲು ಸಾಧ್ಯವಾಗಲಾರದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಚ್ಚರಿಕೆ ನೀಡುತ್ತದೆ. ಆರ್ಥಿಕ ಬಿಕ್ಕಟ್ಟು, ಬೆಲೆಯೇರಿಕೆ, ನಿರುದ್ಯೋಗ ಮುಂತಾದ ಸಮಸ್ಯೆಗಳಿಗೆ ಪರಿಹಾರ ದೊರೆಯಲು ಬೇರೆ ವರ್ಗ ಸಮಾಜ ಅಗತ್ಯ. ಕಾಂಗ್ರೆಗೆ ಮತಕೊಟ್ಟ ಜನರೂ ಸಹ ಬೇಗನೇ ಅದರ ಧೋರಣೆಗಳಿಗೆ ವಿರುದ್ಧವಾಗಿ ಬರುವವರಿದ್ದಾರೆ. ಜನತೆಯ ಸಂಕಟಗಳ ವಿರುದ್ಧ ವಿಶಾಲ ಪ್ರತಿಭಟನೆಗಳು ಬರುವ ಸಂಭವವಿದೆ. ಪ್ರಜಾಪ್ರಭುತ್ವಾತ್ಮಕದ ಮತ್ತು ಜೀವನ ಸಂರಕ್ಷಣೆಯ ಹೋರಾಟಗಳು ಕ್ರಮೇಣ ಒಂದುಗೂಡಲಿವೆ. ಈ ಸವಾಲನ್ನೆದುರಿಸಿ, ಸರ್ವಾಧಿಕಾರಿ ಧಾಳಿಯ ವಿರುದ್ಧ ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೋರಾಟವನ್ನು ಯಾವ ಸಂಕೋಚವೂ ಇಲ್ಲದೆ ದೃಢವಾಗಿ ನಡೆಸೋಣ.

ಈ ಕರೆಯು ಅತ್ಯಂತ ಸೂಕ್ತವಾಗಿದೆ ಮತ್ತು ಅವಶ್ಯಕವಾದುದಾಗಿದೆ. ನಮ್ಮ ಜನತೆ ಇದನ್ನು ಸ್ವಾಗತಿಸುವುದರಲ್ಲಿ ಸಂಶಯವಿಲ್ಲ.

"ಕಂಪೂಚಿಯಾಕ್ಕೆ ಶುಭಾಶಯಗಳು"

[1ನೇ ಪುಟದಿಂದ]

ಮುಂದೊಯ್ಯಲು ರಸ್ತೆಯು ಸುಗಮವಾಯಿತು.

ಪೋಲ್‌ಪೋಟ್‌ನ ಸರಕಾರದ ತಪ್ಪು ಧೋರಣೆಗಳಿಂದಲಾಗಿ ಕಂಪೂಚಿಯಾವು ತೀವ್ರ ಕ್ಷಾಮಕ್ಕೊಳಗಾಗಿತ್ತು. ಹಸಿವೆಯಿಂದ ಸಾಯುವ ಜನತೆಗೆ ಅನ್ನ ಕೊಡುವುದು ಮತ್ತು ತನ್ನ ಕಾಲ ಮೇಲೆ ನಿಲ್ಲಲು ಸಾಧ್ಯವಾಗುವಂತೆ ಮಾಡಲು ರಾಷ್ಟ್ರೀಯ ಪುನರ್ ನಿರ್ಮಾಣಗೊಳಿಸುವಂತಹ ಕೆಲಸಗಳನ್ನು ಮತ್ತೆ ಮೊದಲಿಂದಲೇ ಮಾಡುವ ಜವಾಬ್ದಾರಿಯು ಹೊಸ ಸರಕಾರದ ಮೇಲೆ ಬಿತ್ತು. ಕಂಪೂಚಿಯಾದ ಕ್ರಾಂತಿಕಾರಿ ಮಂಡಳಿಯು ವಹಿಸಿಕೊಂಡ ಈ ಕಠಿಣವಾದ ಮತ್ತು ಗುರುತರವಾದ ಕರ್ತವ್ಯಗಳು ಆದಷ್ಟು ಶೀಘ್ರ ಜಯಪ್ರದಗೊಳ್ಳಲಿ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಆಶಿಸುತ್ತದೆ.

ಕಂಪೂಚಿಯಾದ ಜನತೆಯು ಕಷ್ಟದಲಾಭವನ್ನು ಪಡೆದು, ಪೋಲ್‌ಪೋಟ್‌ನ ಪರವಾಗಿ ಅಳಿದುಳಿದ ವ್ಯಕ್ತಿಗಳನ್ನೆಲ್ಲಾ ಉಪಯೋಗಿಸಿ ಕಂಪೂಚಿಯಾದಲ್ಲಿ ಹಸ್ತಕ್ಷೇಪಮಾಡಲೂ ಮತ್ತು ಇಂಡೋ ಚೈನಾದಲ್ಲಿ ಹಸ್ತಕ್ಷೇಪ ನಡೆಸಲು ಇದನ್ನು ಒಂದು ರಂಗವನ್ನಾಗಿಸಲೂ ಅಮೇರಿಕ ಮತ್ತು ಇತರ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಲಿವೆ. ಸೋವಿಯೆತ್‌ರಶಿಯಾ ಮತ್ತು ಸಮಾಜವಾದಿ ವಿಯೆತ್ನಾಮ್‌ಗಳ ಬಗ್ಗೆ ಕುರುಡು ವಿರೋಧವನ್ನಿರಿಸಿಕೊಂಡು, ಚೈನಾದ ಸಮಾಜವಾದಿ ಸರಕಾರವು ಅಮೇರಿಕಾ ಸಾಮ್ರಾಜ್ಯಶಾಹಿಯ ಕುತಂತ್ರಗಳಿಗೆ ಬೆಂಬಲವೀಯುವುದು ಬಹಳ ಬೇಸರ.

ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಬಯಲಿಗೆಳೆಯಲೂ ಮತ್ತು ಅವನ್ನು ವಿರೋಧಿಸಲೂ ಸತತವಾಗಿ ಶ್ರಮಿಸುತ್ತಾ ಬಂದಿರುವ ಸಿ. ಪಿ. ಐ. (ಎಂ) ಸಾಮ್ರಾಜ್ಯಶಾಹಿಗಳು ಸಂಪೂರ್ಣ ಸೋಲನ್ನನುಭವಿಸುವ ತನಕವೂ ನಿರಂತರವಾಗಿ ಹೋರಾಡುವುದು.

ಕಂಪೂಚಿಯಾದಲ್ಲಿ 'ಹೆಂಗ್ ಸಮಾರಿನ್' ಅವರ ಮುಖಂಡತ್ವದಲ್ಲಿ ಜನತೆಯ ಕ್ರಾಂತಿಕಾರಿ ಮಂಡಳಿಯು ಸ್ಥಾಪನೆಯಾದಂದಿನಿಂದಲೂ ಈ ಸರಕಾರಕ್ಕೆ ಮಾನ್ಯತೆ ನೀಡುವಂತೆ ಸಿ. ಪಿ. ಐ. (ಎಂ) ಭಾರತ ಸರಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಈ ಬೇಡಿಕೆಯು ಈಡೇರುವ ತನಕ ಸಿ. ಪಿ. ಐ. (ಎಂ) ಈ ಬಗ್ಗೆ ಒತ್ತಾಯಿಸುವುದು.

ಕಠಿಣವಾಗಿರುವ ಕ್ಷಾಮ ಪರಿಸ್ಥಿತಿಯ ನಿವಾರಣಾ ಕಾರ್ಯದಲ್ಲೂ ಮತ್ತು ರಾಷ್ಟ್ರೀಯ ಪುನರ್ರಚನೆಮಾಡಿ ಸಮಾಜವಾದದ ಪಥದಲ್ಲಿ ಮುಂದೆ ಹೋಗುವ ಮಹಾ ಕಾರ್ಯದಲ್ಲೂ ಕಂಪೂಚಿಯಾದ ಜನತೆಗೂ, ರಾಷ್ಟ್ರೀಯ ಐಕ್ಯರಂಗಕ್ಕೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಲ್ಲಾ ಯಶಸ್ಸನ್ನೂ ಬಯಸುತ್ತಾ ಮತ್ತೊಮ್ಮೆ ತನ್ನ ಶುಭಾಶಯಗಳನ್ನು ಕಳುಹಿಸುತ್ತದೆ. ○

ಅಸ್ಸಾಂ : ಪರಿಸ್ಥಿತಿ ಮುಂದುವರಿದರೆ ದೇಶಕ್ಕೆ ಗಂಡಾಂತರ

2ನೇ ಪುಟದಿಂದ

ರಾಜ್ಯದ ಜನತೆಗೆ, ದೇಶದ ಉಳಿದ ಭಾಗಗಳ ಜನತೆಗೆ ವಿವರಿಸಬೇಕೆಂದು ಪೊಲಿಟ್‌ಬ್ಯೂರೋ ಕರೆ ನೀಡಿದೆ. ಮತದಾರರ ಪಟ್ಟಿಯಿಂದ ವಿದೇಶಿಯರ ಹೆಸರನ್ನು ತೆಗೆದುಹಾಕುವುದು, ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದು ಮುಂತಾದ ಕೆಲಸವನ್ನು ಕಾನೂನಿನ ಪ್ರಕಾರ ನಡೆಯಬೇಕು ಒತ್ತಡ, ಪ್ರಭಾವಗಳಿಂದ ಈ ಕೆಲಸವನ್ನು ದೂರವಿಡಬೇಕು. ಭಾರತ ಸರಕಾರ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಚಳುವಳಿಗಳು ಅಲ್ಪಸಂಖ್ಯಾತರಾದ ಮುಸ್ಲಿಮರು, ಬಂಗಾಳಿಗಳು, ಬಿಹಾರಿಗಳ ಭಾರತೀಯ ಪೌರತ್ವದ ಹಕ್ಕಿಗೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕಾಗಿದೆ. ಈ ಹಕ್ಕು ಉಳಿಯದೆ ಹೋದರೆ ಭಾರತವೂ ಇಲ್ಲ, ಪ್ರಜಾಸತ್ತೆಯೂ ಇಲ್ಲ.

ಸದ್ಯದ ಪರಿಸ್ಥಿತಿಯನ್ನು ನಮ್ಮ ಜನತೆಯ ಶತ್ರುಗಳಾದ ಸಾಮ್ರಾಜ್ಯಶಾಹಿಗಳು ಹಾಗೂ ಅವರ ಏಜಂಟರಾದ ಸಿ. ಐ. ಎ.ನವರು ದೇಶದ ಒಗ್ಗಟ್ಟನ್ನು ಒಡೆಯಲು ಉಪಯೋಗಿಸುತ್ತಿರುವುದರ ವಿರುದ್ಧ ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋ ಎಚ್ಚರಿಸಿದೆ. ಸಿ. ಐ. ಎ. ನವರು ದೇಶವನ್ನು ಛಿದ್ರಗೊಳಿಸಲು ರೂಪಿಸಿರುವ "ಬ್ರಹ್ಮಪುತ್ರ ಪ್ರಾಜೆಕ್ಟ್" ದೇಶವನ್ನು ಗಂಡಾಂತರಕ್ಕೆ ಈಡುಮಾಡುವ ಸಿ.ಐ.ಎ. ಕುತಂತ್ರಕ್ಕೆ ಸಾಕ್ಷಿಯಾಗಿದೆ.

ಸಮಸ್ಯೆಯನ್ನು ಬಗೆಹರಿಸುವಲ್ಲಿ ಆಗುವ ಯಾವುದೇ ವಿಳಂಬವೂ ತೀವ್ರ ಆತಂಕಕಾರಿಯಾಗುತ್ತದೆಂದು ಸಿ. ಪಿ. ಐ. (ಎಂ) ಎಚ್ಚರಿಸಿದೆ. ಈಗಾಗಲೇ ಮೇಘಾಲಯ ಇಂತಹದೇ ರೋಗದಿಂದ ನರಳುತ್ತಿದೆ, ಮುಂದೆ ಎಲ್ಲಾ ಗಡಿರಾಜ್ಯಗಳಿಗೆ ಈ ರೋಗ ಹರಡಿ ದೇಶದ ಸುಭದ್ರತೆಗೆ ಧಕ್ಕೆ ತರಬಹುದಾಗಿದೆ. ಬಹು ಕಾಲದಿಂದಲೂ ಈಶಾನ್ಯ ರಾಜ್ಯಗಳಲ್ಲಿ ವಿದೇಶಿ ಏಜಂಟರು ಕೆಲಸಮಾಡುತ್ತಿದ್ದು ಈ ಭಾಗದ ಜನತೆಗೂ ದೇಶದ ಉಳಿದ ಜನತೆಗೂ ವೈರತ್ವವನ್ನು ಉಂಟುಮಾಡುವುದರಲ್ಲಿ ನಿರತವಾಗಿವೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಧೈರ್ಯವಾಗಿ ಅಲ್ಪಸಂಖ್ಯಾತರ ರಕ್ಷಣೆ, ದೇಶದ ಐಕ್ಯತೆಯನ್ನು ಕಾಪಾಡುತ್ತಿರುವ ಪಕ್ಷದ ಕಾರ್ಯಕರ್ತರು, ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳನ್ನು ಪೊಲಿಟ್‌ಬ್ಯೂರೋ ಅಭಿನಂದಿಸಿದೆ. ○

ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕು

[ಒಂದನೇ ಪುಟದಿಂದ]

1-2-80 ರಂದು (ಮೂರು ದಿನಗಳು) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸಭೆ ಸೇರಲಿದೆ. ಇದೇ ಸಂದರ್ಭದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಧ್ಯೇಯಗಳಿಗೆ ಬದ್ಧವಾಗಿರುವ ಎಲ್ಲಾ ಶಕ್ತಿಗಳೂ ಒಗ್ಗಟ್ಟನ್ನು ಬೆಳೆಸಲು ಮುಂದಾಗಲು ಸೆಕ್ರೆಟೇರಿಯೆಟ್ ಕರೆಯೀಯುತ್ತದೆ.

○

ದಾಂಡೇಲಿಯಲ್ಲಿ ಸಿ. ಐ. ಟಿ. ಯು. ರಾಜ್ಯಸಮಿತಿ ಸಭೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ(ಕಾರ್ಯಕಾರಿ ಸಮಿತಿ) ಸಭೆಯು ಫೆಬ್ರುವರಿ ಎರಡ(2-2-80)ರಂದು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸೇರಲಿದೆ. ಸದಸ್ಯರುಗಳು ಮತ್ತು ಆಹ್ವಾನಿತರು 1-2-80ರ ರಾತ್ರೆಯೊಳಗೆ ತಪ್ಪಿದಲ್ಲಿ 2-2-80ರಂದು ಬೆಳಿಗ್ಗೆ 9ಗಂಟೆಯೊಳಗೆ ದಾಂಡೇಲಿಯನ್ನು ತಲುಪಬೇಕಾಗಿ ವಿನಂತಿ. ನೇರವಾಗಿ ಬಸ್‌ಸೌಕರ್ಯವಿಲ್ಲದಲ್ಲಿ ಹುಬ್ಬಳ್ಳಿಗೆ ಬಂದಲ್ಲಿ, ಅಲ್ಲಿಂದ ಬೆಳಗಿನ ಜಾವದಿಂದ ಸಂಜೆ ತನಕ ದಾಂಡೇಲಿಗೆ ಬಸ್ಸುಗಳು ದೊರೆಯುವವು. ಚಳಿ ಜೋರಾಗಿರುವುದರಿಂದ 2ರಂದು ರಾತ್ರೆ ದಾಂಡೇಲಿಯಲ್ಲಿ ಉಳಿದುಕೊಳ್ಳಬಯಸುವವರು ದಪ್ಪಗಿನ ಬಟ್ಟೆಬರೆ ತರಬೇಕು. ದಾಂಡೇಲಿ ಬಸ್‌ನಿಲ್ದಾಣದಲ್ಲಿ 1ರ ಸಂಜೆ ಮತ್ತು 2ರಂದು ಬೆಳಿಗ್ಗೆ ಸ್ವಯಂ ಸೇವಕರನ್ನು ವ್ಯವಸ್ಥೆ ಮಾಡಲಾಗುವುದು.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT